Lahari COMMUNIQUE
Its Unique!
Volume : 1
September -2010
Part 5
Price : Rs. 2

## Direct Tax Code to replace Income Tax Act

With tabling of Direct Tax Code (DTC) in Lok Sabha on 30th August, it has become certain that the new law will replace the age old Income Tax Act. Accused as being complicated, obsolete and not user friendly, the Income Tax Act is giving way to a more simpler DTC.

The Bill tabled in the Lok Sabha by the Union Minister for Finance, Pranab Mukherjee, seeks to fix income tax slabs to levy 10 per cent rate on income between Rs 2 lakh to 5 lakh, 20 per cent on between Rs 5-10 lakh and 30 per cent above Rs 10 lakh.

Other salient features of the Bill are, senior citizens' tax exemption slab is raised to Rs 2.5 lakh from Rs 2.40 lakh.

For others tax slabs are 10 per cent for Rs 1.6 lakh to Rs 10 lakh, 20 per cent between Rs 10-25 lakh and 30 per cent for income above Rs 30 lakh.

The bill seeks to fix corporate tax at the current 30 per cent but without surcharge and cess. With surcharge and cess, the current tax liability on corporates comes to over 33 per cent.

## J| J.S.Khehar sworn in as Karnataka Chief Justice

Justice Jagadish Singh Khehar was sworn in as the Chief Justice of Karnataka High Court on 8th August. He was administered oath of office by the Governor, H. R. Bharadwaj. CJ J.S.Khehar has been transferred to Karnataka from Uttaranchal High Court following CJ P.D.Dinakaran's transfer from Karnataka to Sikkim.

Interestingly, the present Chief as an Advocate had represented M. Krishnaswamy, M.P. (from the Arani constituency in Tamil Nadu), in the defence of J| V. Ramaswami, then Judge of the Supreme Court, before the Judges Inquiry Committee constituted to investigate the grounds on which the removal of J| V. Ramaswami was sought. And now J| Khehar is one of the members in the Judges Inquiry Committee constituted to investigate the alleged misdeeds of CJ P.D. Dinakaran.

J| J.S.Khehar is scheduled to retire on August 28, 2014.

## B.V.Acharya in Law Commission

Senior Advocate and former Advocate General, B.V. Acharya has been appointed as member, Law Commission of India.

Acharya is among the seven members appointed to the Commission headed by J| P V Reddy. The other members include M Mariarputham, R Venkataramani, both Senior Advocates, Supreme Court; C Achyuthan, Corporate Law Chamber, Mumbai; Dr Ranbir Singh, Vice Chancellor, National Law University, New Delhi; Professor M Afzal Wani; and Dr Shashikala, Principal Symbiosis Law School, Pune.

He is the first person to be appointed to the Commission from Karnataka.

See page 3 for his brief profile.

## Bhopal Gas case re opened

The Supreme Court on 31st August agreed to re open the case and reconsider its earlier judgment which had diluted the charge against accused in Bhopal gas tragedy case. The case which was decided in 1996 converted the charge against accused from culpable homicide causing death to rash and negligent act.

In chamber proceedings, a Bench comprising Chief Justice S H Kapadia and Justices Altamas Kabir and R V Raveendran, issued notices on the curative petition filed by the CBI to the respondents who were then in the helm of the affairs of the Union Carbide Company in Bhopal.

It is averred in the curative petition that the judgment sought to be cured suffered from serious errors as the charges under Section 304 Part II of the Indian Penal Code against the accused were quashed by the apex Court without any consideration of the material placed by the prosecution at that stage.

## Retirement age raised for HC judges

A bill that seeks to enhance retirement age of High Court judges from 62 to 65 was introduced in Lok Sabha on 25th August. The move to increase the retirement age of HC judges seeks to bring it on par with the retirement age of Supreme Court judges.

The Constitution (104th Amendment) Bill, 2010 introduced by the Union Law Minister, M Veerappa Moily seeks to amend Article 217 and 224 of the Constitution to increase the retirement age of HC judges. Since the proposed Act is an amendment to the Constitution, it needs support of 2/3rd members of the Parliament.

On an earlier occasion in 1963 the retirement age of HC judges was enhanced from 60 years to 62 years.

"Most of the reasons adduced by the 5th Pay Commission in support of its recommendation for increasing the age of retirement of the central government employees, such as global practices, increase in life expectancy, improved health standards, need for utilisation of experience and wisdom of senior employees could also apply to judges," the Statement of Objects and Reasons of the Bill read.

## Mere dowry demand no offence : SC

Clarifying the provisions conditioned in Sec. 498A and Sec. 304B of the Indian Penal Code, the Supreme Court during first week of August has said that mere demand for dowry is not an offence. It further clarified that demand for dowry is not an offence unless the demand is followed by mental or physical torture resulting in the death of the victim. A Bench of Justices R M Lodha and A K Patnaik said in a judgment that the prosecution has to establish by convincing evidence that the accused had subjected the victim to torture soon before her death in connection with the demand.

*The Securities & Insurance Laws (Amendment and Validation) Bill 2010, has been passed to stop the two regulators, SEBI and Insurance Regulatory Authority quarrelling over whose jurisdiction Ulips came under.*

*In the All India Seminar on Judicial Reforms, CJI Kapadia took the Government to task for not consulting judiciary for appointment of public prosecutors as mandated by Sec. 24 of Cr.P.C.*

*With a spurt in incidents of honour killings across the country, the Government has set up a Group of Ministers (GoM) to consider amendments to the law dealing with the issue.*

*One can not help regretting that where money is concerned, it is so much the rule to overlook moral obligations.- Sir Richard Malins*

**Editor Speaks**

# Regulate commercial surrogacy

Commercial surrogacy described as "rent-a-womb industry" is thriving in India obviously for the reason of absence of any regulation. Surrogacy, where surrogate women bear children on artificial insemination for others has been commercialised in India in the absence of any rules to regulate it. Cases of Indian woman bearing child for foreigners for a fee is increasing and the Government is watching it with both eyes shut, rather not watching it at all on the pretext of encouraging 'medical tourism'.

This throws up a host of questions and concerns. Commercial surrogacy is fundamentally exploitative in the absence of any norms to govern the practice. A decent medical care in the post delivery stage is not assured. Follow up action in case the surrogate woman develops post delivery complications is almost absent in the present practice. Those who are making money in the present system are middlemen who arrange meeting of surrogate mother and rich childless parents. The system as it prevails today neither serves the interest of surrogate mother nor that of parents.

We need a law to curb this practice. The law should be parents friendly and surrogate mother friendly. The law should not give room for unnecessary bureaucratic interference. We need to learn lessons from the unhappy experience of implimenting the Transplantation of Human Organs Act, 1994.

*LAHARI...*

## Chintana Manthana scores a hundred

Lahari Advocate Forum's weekly lecture and interactive programme, Chintana Manthana recently scored a century. The 100th Chintana manthana lecture was delivered on 27.08.2010 by S.P.Shankar, Senior Advocate. The subject of the lecture was `Professionalism – Duty towards clients'.

The function to mark the occasion was inaugurated by Ashok Haranahalli, Senior Advocate and Advocate General. K.N.Putte Gowda, President AAB, R.Rajanna, Secretary, AAB were the guests of honour. S.V.Srinivasa Moorthy, President, Lahari Advocates Forum, presided over the function.

## Now single woman can adopt and parent a child

A move by the Indian Parliament makes another bold effort to put women at par with men. This time it is in the matter of adoption of child.

Personal Laws (Amendment) Bill, 2010 seeks to remove all disabilities woman suffered in adopting a child. Being heiled as another effort to make law gender neutral, the Bill introduced on 22nd August in the Lok Sabha seeks to give equal right to woman in adoption and guardianship of child.

The Bill seeks to amend the archaic Guardians and Wards Act, 1890 paving way to appoint mother as guardian along with the father so that the courts do not appoint any other person as a guardian of the minor if either of the parents is fit for the purpose. Under the existing law, only the father can be a natural guardian of the child, if not declared unfit in the opinion of the court.

## Random Reflections

Of late lawyers are in news for all the wrong reasons. In the backdrop of the slaying of a lady lawyer by another lawyer in the precincts of the High Court and conviction of a lady lawyer for her role in the murder of her prospective groom, image of lawyers' community in the city has been drastically affected.



K.Suryanarayana Rao
9845529448

When persons defending criminals themselves become criminals it is natural that people at large see lawyers in the negative light. Irony is that the twin incidents involving young lawyers has a love tangle as the motive.

This raises an important issue as to whether the influx of unscrupulous persons into the profession could be stalled and that persons who are already members of the legal fraternity be prevented from continuing as lawyers when such continuation becomes untenable. As otherwise the profession can no longer enjoy its status in the society. The State Bar Council has a pivotal role in reigning in the required discipline amongst the lawyers and adopting stringent scrutiny of prospective lawyers before they are enrolled.

Strangely the Advocates' Act states that only the persons convicted of an offence involving moral turpitude and under the provisions of the Untouchability (offences) Act are not entitled for enrolment making it clear that such restrictions ceases to have effect after a period of two years has elapsed since his/her release. This restriction is further diluted in the case of person having been found guilty is dealt with under the provisions of the Probation of Offenders Act. The spelt out disqualifications may not be sufficient safeguards to prevent unscrupulous elements gate crashing in to the profession not withstanding their scandalous background. Revisiting Advocates' Act with regard to disqualification for enrolment is a necessity of the time. State Bar Council is vested with the power of punishment of Advocates on professional or other misconduct through its disciplinary committee on the basis of a complaint or other wise. This power includes removal of the name of the Advocate from the roll of Advocates. It is expected that this power is used appropriately in cases where the lawyers are involved in committing heinous offences on account of which image of the profession gets negatively affected. Otherwise, the Bar Council will be failing in its endeavor of disciplining its members. It is in this regard the resolve of the State Bar Council in initiating action against the Advocates concerned is a welcome step. The outcome of such disciplinary action should be such that it should deter other lawyers from indulging in offences. Lawyers are expected to uphold the law and not subvert the same to implement their nefarious desires. If the fence starts eating the grain then no body can protect the crop.

The other amendment brought in the Hindu Adoption and Maintenance Act, 1956 removes the incapacity of a married woman to take in adoption of a child merely on the basis of her marital status and also provides that the mother with the consent of father and vice a versa shall have equal rights to give in adoption of their children.

The existing law allowed only unmarried woman or divorced women and widows to adopt a child. Similarly, it allows only the father to give in adoption while a mother is allowed only if she is a widow or if her husband has ceased to be a Hindu or declared to be of unsound mind.

*The four public sector general insurance companies — National Insurance, New India Assurance, Oriental Insurance and United India Insurance— are pressing for floating a common third party administrator (TPA) to process the health insurance claims.*

*Research in Motion (RIM) has finally agreed to allow Indian security agencies to monitor its BlackBerry.*

# A brief profile of B.V.Acharya



Born in Belpu village in Udupi Taluk in 1933, Balpu Vasudeva Acharya had his schooling and college education in Mangalore. He obtained degree in law from Madras Law College. He had his apprenticeship under his Senior B.Gangadhar Das, after having enrolled himself before the High Court of Mysore in 1957. He set up his practice in Mangalore. He worked as additional public prosecutor between 1961 and 1965 and District Government Pleader between 1967 and 1972.

He shifted his practice to Karnataka High Court and practiced on civil and criminal sides and in constitutional matters.

He was member, Karnataka State Bar Council between 1973 and 1981. He was its Chairman between 1979 and 1982.

He was designated as Senior Advocate in 1989. He was Advocate General for three terms.

He was advisor to the Governor during President's rule in the State during 2007-08.

Acharya has been conferred with Degree of Doctor of Literature (Honoris Causa) by Mangalore University during 2009.

Acharya, being a member of several law delegations has toured several countries to study foreign legal system.

# GSV: A doyen passes away

In the passing away of Shri.G.S.Vishweshwara, Senior Advocate, the Bangalore Bar has lost an outstanding lawyer.

GSV, as he was known, started his practice in Hassan in the year 1962. In the year, 1966 he joined judicial service. Among a galaxy of lawyers who appeared for the examination, GSV stood first and he was appointed. He worked in Puttur, Hunsur, Chikkodi and Udupi.

His last posting was in Bangalore as the Second Munsiff. Thereafter, he was promoted as Principal 1st Munsiff. In this period the then Chief Justice of Karnataka High Court addressed the members of the Bar on a subject of vital importance, viz, whether Sec. 115 of the C.P.C. should be retained. The then Chief Justice was for retention of the said provision stating that unless the said provision is retained it would not be possible to control the corruption in the lower judiciary.

GSV rightly felt offended. He wrote a letter to the High Court requesting it to initiate proceeding against the CJ for contempt of lower judiciary! The contempt proceedings were in fact initiated but the High Court dismissed it on technical ground.

*Tribute paid to GSV by his junior and a long time associate,*
T.N.Raghupathy, 94498 50918

The fall out of this instance was that the High Court overlooked him in the matter of promotion to the post of Civil Judge. However, GSV was eventually promoted as Civil Judge and posted to Shorapur.

GSV resigned as Civil Judge and started practice as an Advocate in Bangalore. He acquired phenomenal practice within a span of one year. This was mainly due to his hard work and his extra ordinary work as judge. GSV became much sought after Advocate shortly.

GSV specialised himself in Civil matters. Indisputably, he was one of the good lawyers in civil matters. He could get ready for any case in a few minutes time. He used to draft five to eight cases per day. A great virtue of GSV, he never insisted for heavy fee. If he took liking for a client he would conduct the case free of charges.

GSV was designated as Senior Advocate in the year 2000, though he deserved this much earlier. But he never craved for such honour.

GSV trained more than fifty Advocates and all have become independent. He encouraged junior members of the Bar. Many times he appeared for them without charging fee.

GSV was a tough administrator. That helped him in his profession too. He was endowed with tremendous commons sense and a quick grasp of law.

With passing away of GSV the legal fraternity has lost a legend.

# Cattle Slaughter Bill goes to President

The Karnataka Prevention of Slaughter of Cattle Bill 2010 which was sent for Governor's assent, has been referred to the President.

With this the list of bills from the State that are waiting for President's nod has grown to 9. They are,

- Karnataka Molasses Regulation Bill 2004
- Karnataka Land Grabbers (Prevention) Bill 2007
- Karnataka Prevention of Dangerous Activities (Amendment) Bill 2009
- Karnataka Cooperative Societies (Second Amendment) Bill 2010
- The Code of Criminal Procedure (Karnataka Amendment) Bill 2009
- The Indian Penal Code and the Code of Criminal Procedure (Karnataka Amendment) Bill 2009
- Karnataka Control of Organised Crimes (Amendment) Bill 2009

# Bills passed by Parliament during Monsoon Session

The following is the list of the bills that were passed by the Lok Sabha and the Rajya Sabha in the just concluded monsoon session:

- Industrial Disputes (Amendment) Bill, 2009.
- Securities and Insurance Laws (Amendment and Validation) Bill, 2010
- State Bank of India (Amendment) Bill, 2010 (LS)
- Foreign Trade (Development and Regulation) Amendment Bill, 2009
- Clinical Establishments (Registration and Regulation) Bill, 2010
- Energy Conservation (Amendment) Bill, 2010
- National Commission for Minority Educational Institutions (Amendment) Bill, 2009
- Code of Criminal Procedure (Amendment) Bill, 2010.
- Land Ports Authority of India Bill, 2009
- Indian Medical Council (Amendment) Bill, 2010.
- Mines and Minerals (Development and Regulation) Amendment Bill, 2008
- Essential Commodities (Amendment) Bill, 2010
- Jharkhand Panchayat Raj (Amendment) Bill, 2010
- Personal Laws (Amendment) Bill, 2010.
- Foreign Contribution (Regulation) Bill, 2006
- Trade Marks (Amendment) Bill, 2009
- Civil Liability for Nuclear Damage Bill, 2010
- Nalanda University Bill
- Educational Tribunals Bill, 2010

# Impeachment committee enjoys powers of civil Court

Responding to doubts raised by the fact finding committee constituted to examine the issue of impeachment of CJ P.D.Dinakaran, the Rajya Sabha Secretariat has clarified that the committee has all the powers of a civil Court.

The committee constituted under the Judges (Enquiry) Act, 1968 is headed by Supreme Court judge, V S Sirpurkar and having on its board, Shri.P.P.Rao, Senior Advocate and CJ of Karnataka, J.S. Khehar as its members.

The committee going into the issue of impeachment of Justice Dinakaran was set up late last year in the wake of Rajya Sabha Chairman Hamid Ansari admitting a notice from a group of 75 MPs in this regard.

The committee wanted to know whether the MPs who had signed the memorandum which led to the motion being admitted in the Upper House would be able to give the clarifications.

## 'Not much arrears': CJ

The Chief Justice of India, S.H.Kapadia has found a new method of calculation of pending cases. "We cannot treat those cases which are less than a year old as arrears, they can at the most be termed as pendency," says the Chief. According to him the arrears of cases in different Courts across the country is not as huge as projected by the officials of the Supreme Court.

The Chief revealed this while addressing a seminar on judicial reforms in New Delhi.

The CJ tried to differentiate between arrears and pendency. He said the actual number of arrear cases before the trial courts are not three crores but only 1.03 crore. According to his method of calculation, the pendency with the High Courts was not over 40 lakh cases but was only 22.75 lakh.

The CJI favoured segregating cases as "sticky cases", "subverted cases" and "process problem."

He said that "sticky" category will have cases which consume considerable time, while "subverted" cases would be identified as those in which one of the parties try to delay the process and in the "process problem" category the delay could be due to serving summons and notice processing of service like the notice and summons,

## Make more offences compoundable : SC

A bench of the SC wants such offences to be made compoundable which are burdening the arrears list. During first week of August a bench consisting of Justices Markandeya Katju and T S Thakur asked the Centre and the Law Commission to examine the question of making offences 498A (harassment of married woman by husband/relatives), Section 326 (causing grievous hurt) subject to settlement through payment of fine by accused to reduce pendency of such cases.

The bench further suggested that compounding of offence, under which the accused pays monetary compensation, can be resorted to by parties for reconciliation instead of going for protracted litigation.

Court felt that such a step would not only relieve the courts of the burden of deciding cases in which the aggrieved parties have themselves arrived at a settlement but may also encourage the process of reconciliation between them.

## Saket Court complex inaugurated in Delhi

On 28th August, Rs 313 crore court complex project at Saket was inaugurated by the Chief Justice of India. It is being said that the court complex at Saket epitomises modernity with dignity.

Speaking on the occasion, CJI said he had gone through the statistical data of the last 10 years regarding budget allocation for the judiciary. While other states have below one per cent of their GDP being allocated to the judiciary, Delhi tops the chart with 1.6 per cent, he said.

## 'Satyam' Raju gets bail

After spending over 17 months as an undertrial prisoner, Ramalinga Raju, alleged to have siphoned off money from Satyam Computers Ltd, got bail from Andhra Pradesh High Court on 18th August.

Raju, who was arrested on 7th January 2009 spent most of the incarcerated period in hospital as an inpatient.

With release of Raju all the 10 accused in the Rs. 14,000 crore Satyam accounting fraud case have been out on bail granted by various courts.

### ACHIEVEMENTS

- K.S.Nataraju, Advocate, has been selected by the Masters Athletics Federation of India (R) to participate in 60+ M road race to represent India in the 16th Asian Masters Athletic Championship scheduled to be held in Malaysia from 6th to 12th December.
- G.R.Shiva Kumar, Advocate has been re-elected as the President of Divyajyothi Credit Co-Operative Society.

### EVENTS & HAPPENINGS

- On 15.08.2010 the Bangalore Advocates Association, Advocates' Co Operative Society and Bengaluru Advocates Literary Union jointly celebrated Independence day.
- On 28.08.2010 an interactive session was held in Vakeelara Bhavana, AAB, Bangalore, on the occasion of release of second edition of a Kannada book titled 'Vakeeli Dinagalu' authored by Haa.Raa.

## SEBI can inquire CA firm, Pricewater

In a judgment of far reaching implication, the Bombay High Court has paved the way for the statutory body, Securities & Exchange Board of India (SEBI) to conduct an inquiry against Chartered Accountant's firm, Pricewaterhouse Coopers (PWC) in connection with the Satyam scam.

Earlier SEBI had issued a show-cause notice to PWC, which was challenged by the Firm on the ground that only their professional body, Institute of Chartered Accountants of India can inquire into the conduct of chartered accountants and not SEBI.

PWC, had been associated with Satyam Computers Ltd., for several years as auditors. It is alleged agaisnt them that they kept quite about murky financial dealings of Satyam, although they were the company's auditor for several years.

It was argued on behalf of SEBI that auditors have a direct, fiduciary relationship with shareholders and shareholders incurred losses for decisions taken by them based on Satyam's balance sheet.

## Nalanda University to be revived

Nalanda in Bihar, an ancient seat of learning of historic period is likely to be revived if every thing goes according to Government's plan.

The Government on 12th August introduced in the Rajya Sabha a bill The Nalanda University Bill, 2010, to revive the Buddhist seat of learning. The bill seeks to establish a central university in Nalanda.

Introducing the bill, External Affairs Minister S M Krishna said the university will impart education and enable research towards capacity building in the domain of ancient science which was practised in Nalanda several centuries ago.

It has been proposed that the Nalanda Mentor Group, headed by Nobel laureate Amartya Sen, will function as the interim governing board.

### Obituary

*We regret to inform the sad demise of the following person*

- On 09.08.2010.G.S.Vishweshwara (76), Senior Advocate passed away at Bangalore.
- On 10.08.2010 M.P.Ramalingaiah (80), Advocate and professor of law passed away at Bangalore.
- On 20.08.2010 K.Srikantaiah (74), Advocate passed away at Bangalore.
- On 28.08.2010 M.S.Padmarajaiah, Senior Advocate and Barrister, passed away.

**Published by** : S. N. Prashanth Chandra, Lahari Advocates Forum, No. 2980, "Laxmideep", 17th Cross, K.R. Road, BSK II Stage, Bangalore-560 070
**Printed at** : Vee Kay Printers & Publishers, # 396, Ooliga Complex, Sampige Road, Malleshwaram, Bangalore-560 003.
**Editor : Aravind. M. Neglur.** aravindneglur@gmail.com KARBIL 01707 / 10 /1/2009-TC

# ಲಹರಿ ಸಂವಾದ

ಸಂಪುಟ – ೧ | ಶ್ರೀ ವಿಕೃತಿ ನಾಮ ಸಂವತ್ಸರ ಶ್ರಾವಣ – ಭಾದ್ರಪದ | ಸಂಚಿಕೆ – ೫

ಒಳಗೇನಿದೆ?

ಪುಟ ೧ : ಉಪ್ಪಿನಕಾಯಿ, ತಿಂಗಳ ಸುದ್ದಿ
ಪುಟ ೨ : ಲಹರಿ
ಪುಟ ೩ : ಸುದ್ದಿ ಮತ್ತು ಅಂಕಣ
ಪುಟ ೪ : ಸುದ್ದಿ

## ಉಪ್ಪಿನಕಾಯಿ

### 'ಅಯೋಧ್ಯಾ ರಾಮ' ಮತ್ತೆ ರಂಗಸ್ಥಳಕ್ಕೆ

ದಶಕಗಳ ಹಿಂದೆ ರಾಜಕೀಯ ಮತ್ತು ಸಾಮಾಜಿಕ ತಲ್ಲಣಗಳನ್ನು ಉಂಟುಮಾಡಿದ್ದ ಅಯೋಧ್ಯಾ ವಿವಾದ ಮತ್ತೆ ಸಾಮಾಜಿಕ ಮತ್ತು ರಾಜಕೀಯ ರಂಗಸ್ಥಳಕ್ಕೆ ಬರುವ ಎಲ್ಲ ಲಕ್ಷಣಗಳಿವೆ.

ವಿವಾದಗಳಿಗೆ ಸಂಬಂಧಿಸಿದ ದಾವಾಗಳನ್ನು ಆಲಿಸುತ್ತಿದ್ದ ಅಲಹಾಬಾದ್ ಉಚ್ಚ ನ್ಯಾಯಾಲಯದ ಲಕ್ನೋ ಬೆಂಚಿನ ವಿಶೇಷ ಪೀಠ ವಾದ ಪ್ರತಿವಾದದ ಸುನಾವಣೆ ಪೂರ್ಣಗೊಳಿಸಿ ದಾವಾಗಳನ್ನು ತೀರ್ಪಿಗಾಗಿ ಕಾದಿರಿಸಿದೆ. ತೀರ್ಪು ಯಾವುದೇ ಕ್ಷಣಕ್ಕೂ ಹೊರಬೀಳಬಹುದು.

### 'ಬಾಕಿ ಬಹಳ ಇಲ್ಲ' : ಸಿ ಜೆ

ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ, ಎಸ್.ಎಚ್. ಕಪಾಡಿಯಾ, ದೇಶದಾದ್ಯಂತ ಕೆಳ ಹಂತದ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆಯ ಬಗ್ಗೆ ಹೊಸ ಬೆಳಕು ಚೆಲ್ಲಿದ್ದಾರೆ.

"ಬಾಕಿ ಪ್ರಕರಣಗಳ ಸಂಖ್ಯೆ ಈಗ ಬಿಂಬಿಸಲಾಗುತ್ತಿರುವಂತೆ ಮೂರು ಕೋಟಿಗಳಲ್ಲ, ಬದಲಾಗಿ ಕೇವಲ ಒಂದು ಕೋಟಿ ಮೂವತ್ತು ಲಕ್ಷಗಳು", ಎಂದಿದ್ದಾರೆ ಮುಖ್ಯ ನ್ಯಾಯಮೂರ್ತಿ. ಹಾಗೆಯೇ, ಅವರ ಪ್ರಕಾರ ಭಾರತದಾದ್ಯಂತದ ಉಚ್ಚ ನ್ಯಾಯಾಲಯಗಳಲ್ಲಿ ಕಳೆದ ಡಿಸೆಂಬರ್ ೩೧ ರಂತೆ ಬಾಕಿ ಇರುವ ಪ್ರಕರಣಗಳು ೪೦ ಲಕ್ಷಗಳಲ್ಲ ಬದಲಾಗಿ ೨೨.೭೫ ಲಕ್ಷಗಳು.

### ಯೋಜಿಸಿದ್ದು ೩೩, ಸಾಧ್ಯವಾದದ್ದು ೧೯

ಆಗಸ್ಟ್ ತಿಂಗಳಾಂತ್ಯಕ್ಕೆ ಕೊನೆಗೊಂಡ ಲೋಕಸಭೆಯ ಮಾನ್ಸೂನ್ ಅಧಿವೇಶನದಲ್ಲಿ ಕೇವಲ ೧೯ ವಿಧೇಯಕಗಳು ಅಂಗೀಕೃತಗೊಂಡಿವೆ. ಸರಕಾರ ಈ ಮೊದಲು ೩೩ ವಿಧೇಯಕಗಳನ್ನು ಮಂಡಿಸಲು ಆಯೋಜಿಸಿದ್ದು, ಧರಣಿ, ಕಲಾಪ ಮುಂದೂಡಿಕೆಯಂತಹ ವಿಘ್ನಗಳ ಮಧ್ಯದಲ್ಲಿ ಮಂಡಿಸಲು ಸಾಧ್ಯವಾಗಿದ್ದು ಕೇವಲ ೧೯ ವಿಧೇಯಕಗಳು.

(ವಿಧೇಯಕಗಳ ವಿವರಗಳಿಗೆ ನೋಡಿ ಕಮ್ಯುನಿಕ್ ಪುಟ ೩)

### ಎಚ್.ಎ.ಎಲ್. ವಿಮಾನ ನಿಲ್ದಾಣ ನಾಗರಿಕರಿಗಿಲ್ಲ : ಸ.ನ್ಯಾ.

ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಿದಾಗಿನಿಂದ ನಾಗರಿಕರಿಗೆ ಮುಚ್ಚಿದ್ದ ಎಚ್.ಎ.ಎಲ್. ವಿಮಾನ ನಿಲ್ದಾಣವನ್ನು ಪುನರಾರಂಭಿಸಲು ಮಾಡಿದ ಪ್ರಯತ್ನಕ್ಕೆ ಅಪಜಯವಾಗಿದೆ. ಸರ್ವೋಚ್ಚ ನ್ಯಾಯಾಲಯ ಈ ಸಂಬಂಧಿ ಅಪೀಲುಗಳನ್ನು ವಜಾ ಮಾಡಿದೆ.

## ತಿಂಗಳ ಸುದ್ದಿ

### ಡಿಎನ್ಎ ಪರೀಕ್ಷೆ– ಅತ್ಯವಶ್ಯಕವಾಗಿದ್ದಲ್ಲಿ ಮಾತ್ರ : ಸ.ನ್ಯಾ

ಸಿವಿಲ್ ಸ್ವರೂಪದ ವ್ಯವಹರಣೆಗಳಲ್ಲಿ ಮಕ್ಕಳ ಪಿತೃತ್ವ ಅಥವಾ ಮಾತೃತ್ವದ ವಿವಾದವಿದ್ದಾಗ ಅತ್ಯವಶ್ಯಕವಾಗಿದ್ದಲ್ಲಿ ಮಾತ್ರ ಮತ್ತು ವಿರಳ ಸಂಧರ್ಭಗಳಲ್ಲಿ ಮಾತ್ರ ಡಿಎನ್ಎ ಪರೀಕ್ಷೆಗೆ ಆಜ್ಞಾಪಿಸಬೇಕೆಂದು ಸರ್ವೋಚ್ಚ ನ್ಯಾಯಾಲಯ ಕೆಳ ಹಂತದ ನ್ಯಾಯಾಲಯಗಳಿಗೆ ಸೂಚಿಸಿದೆ.

ಡಿಎನ್ಎ ಪರೀಕ್ಷೆಯಿಂದ ಹೊರಡುವ ತೀರ್ಮಾನದಿಂದ ಮಗುವಿನ ತಂದೆ ಯಾರೆಂದು ತೀರ್ಮಾನವಾಗುವುದಕ್ಕಿಂತ ಹೆಚ್ಚಾಗಿ ಮಗುವಿನ ಔರತತ್ವ ತೀರ್ಮಾನವಾಗುವುದರಿಂದ ಮತ್ತು ವಿವಾಹ ಸಂಬಂಧದಲ್ಲಿ ಹುಟ್ಟಿದ ಮಗುವೂ ಜಾರ ಪುತ್ರ/ಪುತ್ರಿಯಾಗಿ ಬಿಡುವ ಅಪಾಯವಿರುವುದರಿಂದ ಇಂಥ ಸಂದರ್ಭಗಳಲ್ಲಿ ಕೆಳ ನ್ಯಾಯಾಲಯಗಳು ವಿಶೇಷವಾಗಿ ಜಾಗೃತವಾಗಿರಬೇಕೆಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಸ.ನ್ಯಾ. ಈ ತೀರ್ಮಾನಕ್ಕೆ ಬರಲು ಹಲವಾರು ಇಂಗ್ಲೆಂಡಿನ ಮತ್ತು ಅಮೇರಿಕಾದ ತೀರ್ಮಾನಗಳಲ್ಲಿನ ನ್ಯಾಯಿಕ ಅಭಿಪ್ರಾಯಗಳನ್ನು ಉಲ್ಲೇಖಿಸಿದೆ. ಈ ತೀರ್ಪುಗಳ ಸಾರವೇನೆಂದರೆ "ರಕ್ತ ಪರೀಕ್ಷೆಯಿಂದ ಮಗುವಿನ ತಂದೆ ಯಾರೆಂದು ತಿಳಿಯುವುದಿಲ್ಲ. ಆದರೆ ಯಾರು ತಂದೆ ಅಲ್ಲವೆಂಬುದು ಮಾತ್ರ ತಿಳಿಯಬಹುದಾಗಿದೆ".

ಡಿ.ಎನ್.ಎ. ಪರೀಕ್ಷೆಯ ಕೋರಿಕೆ ಬಂದಾಗ ನ್ಯಾಯಾಲಯ ಎರಡು ತದ್ವಿರುದ್ಧ ಹಿತಾಸಕ್ತಿಗಳಾದ ವ್ಯಕ್ತಿಯೊಬ್ಬನ ಗೌಪ್ಯತೆಯ ಹಕ್ಕು ಮತ್ತು ಸತ್ಯವನ್ನು ಕಂಡು ಹಿಡಿಯಬೇಕಾಗಿರುವ ನ್ಯಾಯಾಲಯದ ಕರ್ತವ್ಯ ಇವುಗಳ ಮಧ್ಯೆ ಸಮತೋಲನ ಸಾಧಿಸಬೇಕೆಂದು ನ್ಯಾಯಾಲಯ ಹೇಳಿದೆ.

### ವಿಮಾನ ವಿಳಂಬ : ಪರಿಹಾರ–ಇನ್ನು ಲಭ್ಯ

ನಾಗರಿಕ ವಾಯುಯಾನದ ಡೈರೆಕ್ಟರ್ ಜನರಲ್, ಸಿವಿಲ್ ಎವಿಯೇಶನ್ ರೂಲ್–ನಿಯಮಾವಳಿಗಳಿಗೆ ಅಂತಿಮ ರೂಪ ನೀಡಿದ್ದಾರೆ. ಆ ಪ್ರಕಾರ ಇನ್ನು ನಾಗರೀಕ ವಿಮಾನಯಾನ ಸಂಸ್ಥೆಗಳು ತಮ್ಮ ವಿಮಾನ ಸೇವೆಯಲ್ಲಿ ವಿಳಂಬವಾದರೆ ನೊಂದ ಗ್ರಾಹಕರಿಗೆ ಪರಿಹಾರ ಕೊಡಬೇಕಾಗಿ ಬಂದಿದೆ. ಆಗಸ್ಟ್ ೧೫ ರಿಂದ ಈ ನಿಯಮಾವಳಿಗಳು ಜಾರಿಗೆ ಬಂದಿವೆ. ಗ್ರಾಹಕ ಹಕ್ಕು ರಕ್ಷಣೆಯಲ್ಲಿ ಇದೊಂದು ಹೊಸ ಮೈಲಿಗಲ್ಲಾಗಿದೆ. ಸಂಬಂಧಿತ ಸಚಿವ ಪ್ರಫುಲ್ ಪಟೇಲ್ ಈ ವಿಷಯವನ್ನು ಲೋಕಸಭೆಗೆ ತಿಳಿಸಿದ್ದಾರೆ.

## ಭಾರತದ ಮಂತ್ರಿ ಅಮೇರಿಕಾದ ನ್ಯಾಯಾಲಯದಲ್ಲಿ ಎಕ್ಸ್ ಪಾರ್ಟೆ

ಈ ವ್ಯಕ್ತಿ ಭಾರತ ದೇಶದಲ್ಲಿ ಕೇಂದ್ರ ಮಂತ್ರಿ, ಆದರೆ ಅಮೇರಿಕಾದ ನ್ಯಾಯಾಲಯವೊಂದು ಹೊರಡಿಸಿದ ಸಮನ್ಸಿಗೆ ಉತ್ತರಿಸಲು ವಿಫಲರಾಗಿದ್ದರಿಂದ ಅಮೇರಿಕಾದ ನ್ಯಾಯಾಲಯ, ಆ ಪ್ರಕರಣದಲ್ಲಿ ಈ ಕೇಂದ್ರ ಮಂತ್ರಿಯನ್ನು ಎಕ್ಸ್ ಪಾರ್ಟೆಯಾಗಿ ಮಾಡಿ ಆಜ್ಞೆ ಹೊರಡಿಸಿದೆ.

ಈ ಪ್ರಕರಣದ ಪದರಗಳು ಬಿಚ್ಚಿಕೊಳ್ಳುವುದು ಹೀಗೆ. ಇಂದಿರಾ ಗಾಂಧಿ ಹತ್ಯೆಯ ನಂತರದ ಸಿಖ್ ಹತ್ಯಾಕಾಂಡದಲ್ಲಿ ಈಗ ಕೇಂದ್ರದಲ್ಲಿ ಮಂತ್ರಿಯಾಗಿರುವ ಕಮಲ್ ನಾಥ್‌ರ ಪಾತ್ರವಿತ್ತೆಂದು ಆಪಾದಿಸಿ, ಅಮೇರಿಕಾದ ಸಿಖ್ಖರ ಒಕ್ಕೂಟವೊಂದು ಅಮೇರಿಕಾದ ನ್ಯಾಯಾಲಯದಲ್ಲಿ ಕಮಲ್‌ನಾಥರ ವಿರುದ್ಧ ಪರಿಹಾರ ಕೇಳಿ ದಾವಾ ಹೂಡಿತು. ದಾವಾ ಹೂಡಿದ್ದು ಏಲಿಯನ್ ಟಾರ್ಟ್ಸ್ ಕ್ಲೇಮ್ಸ್ ಆ್ಯಕ್ಟನಡಿಯಲ್ಲಿ. ದಾವಾ ದಾಖಲಿಸಿದ್ದು ಹತ್ಯಾಕಾಂಡ ನಡೆದ ಸುಮಾರು ೨೫ ವರ್ಷಗಳ ನಂತರ.

ಅಲ್ಲಿ, ಅಮೇರಿಕಾದ ಈ ನ್ಯಾಯಾಲಯ ಹೊರಡಿಸಿದ ಸಮನ್ಸಿಗೆ ಕಮಲ್‌ನಾಥ್ ಉತ್ತರಿಸಲಿಲ್ಲವೆಂದು ನ್ಯಾಯಾಲಯದ ದಾಖಲೆ ಹೇಳುತ್ತದೆ. ಆದ್ದರಿಂದ ಪ್ರತಿವಾದಿ 'ಉತ್ತರಿಸಲು ಕರ್ತವ್ಯಲೋಪ' ಎಸಗಿದ್ದಾರೆಂದು ಆಜ್ಞೆ ಮಾಡಿದೆ. ಈಗ ನ್ಯಾಯಾಲಯ ಏಕಪಕ್ಷೀಯವಾಗಿ ಪ್ರಕರಣ ಪರಿಶೀಲಿಸಿ ತೀರ್ಪು ನೀಡಲು ಮುಂದಾಗಿದೆ.

ಇಲ್ಲಿ ಕೇಂದ್ರ ಮಂತ್ರಿ ಕಮಲ್‌ನಾಥ್ ಹೇಳುವುದೆ ಬೇರೆ. "ನನಗೆ ಅತ್ಯಾಶ್ಚರ್ಯವಾಗಿದೆ, ನನಗೆ ಯಾವ ಸಮನ್ಸೂ ಅಮೇರಿಕಾದಿಂದ ಬಂದಿಲ್ಲ. ನನ್ನನ್ನು ಎಕ್ಸ್ ಪಾರ್ಟೆ ಮಾಡಿದ್ದನ್ನು ನಾನು ಪತ್ರಿಕೆಯಲ್ಲಿ ಓದಿ ತಿಳಿದುಕೊಂಡೆ. ೨೫ ವರ್ಷಗಳ ಹಿಂದೆ ಭಾರತದಲ್ಲಿ ನಡೆದ ಘಟನೆಗೆ ಅಮೇರಿಕಾದಲ್ಲಿ ಪರಿಹಾರ ಕೊಡಲು ಅಲ್ಲಿನ ನ್ಯಾಯಾಲಯಕ್ಕಿರುವ ಅಧಿಕಾರವೇನು ಎಂಬುದು ತಿಳಿಯುತ್ತಿಲ್ಲ' ಎಂದಿದ್ದಾರೆ.

ತಮ್ಮ ಸಿಖ್ ಅಂಗರಕ್ಷಕರಿಂದ ಇಂದಿರಾ ಗಾಂಧಿ ಹತ್ಯೆಗೊಳಗಾದ ನಂತರ ಸಿಖ್ಖರ ವಿರುದ್ಧ ಪ್ರತೀಕಾರ ಕೈಗೊಳ್ಳಲು ಉತ್ತರ ಭಾರತದಾದ್ಯಂತ ಗಲಭೆ ಭುಗಿಲೆದ್ದಿತು. ಈ ಗಲಭೆಯಲ್ಲಿ ಹಲವು ಸಿಖ್ಖರ ಮಾರಣ ಹೋಮ ನಡೆಯಿತು. ಈ ಗಲಭೆಗಳಲ್ಲಿ ಹಲವಾರು ಕಾಂಗ್ರೆಸ್ ನಾಯಕರ ಕೈವಾಡವಿದೆಯೆಂದು ಆಪಾದಿಸಲಾಗಿತ್ತು. ಈ ಕುರಿತ ಪ್ರಕರಣಗಳು– ಆವಾಗ ದಾಖಲಾದವು – ಭಾರತದಲ್ಲಿ ಇನ್ನೂ ಜಾರಿಯಲ್ಲಿವೆ.

ಆದರೆ ಇಷ್ಟು ವರ್ಷಗಳ ನಂತರ ಅದೂ ಪರದೇಶದಲ್ಲಿ ದಾಖಲಾದ ಈ ಪ್ರಕರಣ ಅಪರೂಪದ್ದು. 'ಸಿಖ್ಸ್ ಫಾರ್ ಜಸ್ಟಿಸ್' ಎಂಬ ಅಮೇರಿಕಾದ ಸಿಖ್ಖರ ಸಂಘ ನ್ಯೂಯಾರ್ಕ್ ಫೆಡರಲ್ ನ್ಯಾಯಾಲಯದಲ್ಲಿ ಈ ದಾವಾ ತಂದಿದೆ.

# ಬೆಳ್ಳಿ ಬೆಡಗಿನಲ್ಲಿ ಲಹರಿ ಚಳವಳಿ

ಎಂಭತ್ತರ ದಶಕದ ಮಧ್ಯಭಾಗ. ಬೆಂಗಳೂರು ವಕೀಲರ ಸಮುದಾಯದಲ್ಲಿ ಕ್ರಿಯಾಶೀಲರಾಗಿದ್ದ ಕೆ. ಸೂರ್ಯನಾರಾಯಣ ರಾವ್, ಅವರ ನೇತೃತ್ವದಲ್ಲಿ, ಅವರಷ್ಟೇ ಉತ್ಸಾಹಿ ವಕೀಲ ಮಿತ್ರರುಗಳಾಗಿದ್ದ ದಿ॥ ಪಿ.ಜಿ.ಸಿ. ಚಂಗಪ್ಪ, ದಿ॥ ಜೇಷ್ಟ್‌ಮಲ್, ಜೆ.ಎಸ್. ವಸಂತಕುಮಾರ್, ಪಿ.ಎಸ್. ಶ್ರೀಧರ ಮೂರ್ತಿ, ಸಿ. ಲಕ್ಷ್ಮೀನಾರಾಯಣ ರಾವ್, ಎಸ್. ನಾಗಭೂಷಣ ರಾವ್, ಎ.ಎಸ್. ಶೇಷಗಿರಿ ರಾವ್ ಮೊದಲಾದ ಸಮಾನ ಮನಸ್ಕರು ಆಗಾಗ ಒಂದೆಡೆ ಕಲೆತು ವ್ಯಕ್ತಿ ಸಂಬಂಧಿ ವಿಷಯಗಳ ಜೊತೆಗೆ ಅಂದಂದಿನ ಪ್ರಚಲಿತ ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳ ಬಗ್ಗೆಯೂ ಚರ್ಚಿಸುತ್ತಾ ತಂತಮ್ಮ ಆಲೋಚನಾ ಲಹರಿಗಳನ್ನು ತೇಲಿಬಿಡುತ್ತಿದ್ದರು. ಸಾಮಾನ್ಯವಾಗಿ ವಕೀಲರ ಸಂಘದ ಹಳೆಯ ಗ್ರಂಥಾಲಯ ಕಟ್ಟಡದಲ್ಲಿ ಅನೌಪಚಾರಿಕವಾಗಿ ಜರುಗುತ್ತಿದ್ದ, ವೃತ್ತಿಯ ದೈನಂದಿನ ಪರಿಶ್ರಮಗಳನ್ನು ಮರೆಸುವಷ್ಟು ಚೇತೋಹಾರಿಯಾಗಿ ನಡೆಯುತ್ತಿದ್ದ ಚರ್ಚೆಗಳು ಮೇಲ್ಕಂಡ ಸದಸ್ಯರಿಗಷ್ಟೆ ಸೀಮಿತವಾಗದೆ, ಜೊತೆಗಿದ್ದ ವಕೀಲ ಮಿತ್ರರಿಗೂ ಪ್ರಯೋಜನಕಾರಿಯಾಗಿ ಕಂಡು ಬಂದ ಫಲವಾಗಿ ವಿದ್ಯುಕ್ತವಾಗಿ ಒಂದು ಸಂಸ್ಥೆಯನ್ನೇ ಸ್ಥಾಪಿಸಲು ಸದರಿ ಸದಸ್ಯರು ತೀರ್ಮಾನಿಸಿದರು. ಅದರಂತೆ ಕೆ. ಸೂರ್ಯನಾರಾಯಣ ರಾವ್ ಅವರು ಸೂಚಿಸಿದ 'ಲಹರಿ' ಎನ್ನುವ ನಾಮಾಂಕಿತದೊಂದಿಗೆ ಸಾಂಸ್ಥಿಕ ಸ್ವರೂಪವನ್ನು ಪಡೆದ 'ಲಹರಿ' ೧೯೮೬ರ ಮಾರ್ಚ್ ೭ರಂದು ಚಾಲನೆಯನ್ನು ಪಡೆಯಿತು.

## ಲಹರಿ

ವಕೀಲರ ಮತ್ತಾವುದೇ ಸಂಘಟನೆಗಳಿಗೆ ಸ್ಪರ್ಧೆಯೊಡ್ಡದೆ, ಅವುಗಳ ಜೊತೆ ಪೂರಕವಾಗಿ ಕೆಲಸ ಮಾಡುತ್ತಾ, ವಕೀಲರ ಸರ್ವಾಂಗೀಣ ಅಭಿವೃದ್ಧಿಯನ್ನಷ್ಟೇ ಧ್ಯೇಯವಾಗಿಸಿಕೊಂಡು, ೧೯೮೬ರಿಂದ ತನ್ನ ಸೃಜನಾತ್ಮಕ ಚಟುವಟಿಕೆಗಳನ್ನು ನಿರಂತರವಾಗಿ ವ್ಯಾಪಕವಾಗಿ ವಿಸ್ತರಿಸಿಕೊಳ್ಳುತ್ತಾ, ಇಂದು 'ಬೆಳ್ಳಿ'ಬೆಡಗಿನಲ್ಲಿ 'ಲಹರಿ ಚಳವಳಿ' (Lahari Movement) ಎಂದು ಕರೆಸಿಕೊಳ್ಳುವಷ್ಟರಮಟ್ಟಿಗೆ ವಕೀಲರ ಸಮುದಾಯದಲ್ಲಿ ಬೇರು ಬಿಟ್ಟ 'ಲಹರಿ ಸಕ್ಸೆಸ್ ಸ್ಟೋರಿ' ಕವಲೊಡೆದದ್ದು ಹೀಗೆ: (ಇದನ್ನು ಅಭಿಮಾನದಿಂದ 'ಲಹರಿ ಪರಿವಾರ' ಎಂದೇ ಕರೆಯುತ್ತಾರೆ. 'ಲಹರಿ'ಯ ಮೆಂಟರ್ ಸೂರ್ಯನಾರಾಯಣ ರಾವ್.)

**ಸೂತ್ರಧಾರ ರಾಮಯ್ಯ**
೯೪೪೮೩ ೧೧೭೨೧

● ಲಹರಿ ● ಲಹರಿ ವಕೀಲರ ವೇದಿಕೆ ● ಕಮ್ಯೂನಿಕ್-ಸಂವಾದ ಪತ್ರಿಕೆಗಳ ಪ್ರಕಟಣೆ ● ಲಹರಿ ಫೌಂಡೇಷನ್ ● ಲಹರಿ ಲಾ ಅಕಾಡೆಮಿ ● ಲಹರಿ ಜರ್ನಲಿಸ್ಟ್ ಗಿಲ್ಡ್ ● ಲಹರಿ ಬುಕ್ ಬ್ಯಾಂಕ್.

ಬೆಳಿಗ್ಗೆ ಸೂರ್ಯ ಹುಟ್ಟುವುದು ಎಷ್ಟು 'ಶ್ಯೂರೋ' ಹಾಗೆ; ತಮ್ಮ ವೃತ್ತಿ ಮತ್ತು ವೈಯಕ್ತಿಕ ಬದುಕಿನಲ್ಲಿ ಈ 'ಶ್ಯೂರ್-ರಿಟಿ'ಯನ್ನು ಮೈಗೂಡಿಸಿಕೊಂಡು, ಲಹರಿಯನ್ನು ಮುನ್ನಡೆಸುತ್ತಾ ಬರುತ್ತಿರುವ ಸೂರ್ಯನಾರಾಯಣ ರಾಯರನ್ನು ಕೇಳದೇ ಲಹರಿಯ 'ಯಶೋಗಾಥೆ'ಯ ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದೇನೋ:

೧. ಟೀಂ ವರ್ಕ್-ಯಶಸ್ಸು ನನ್ನೊಬ್ಬನದೇ ಅಲ್ಲ ಅನ್ನುವ ಹೃದಯ ವೈಶಾಲ್ಯತೆ.

೨. ಪ್ರತಿಯೊಂದು ಸಂಸ್ಥೆಯೂ ಪಾಲಿಸಬೇಕಾದ ಒಂದು ಮುಖ್ಯವಾದ ಆಚಾರ- 'ಲೆಕ್ಕಾಚಾರ'. ಸದಸ್ಯರಿಂದ ಪಡೆದ ಹಣಕ್ಕೆ ನೀಡುವ ರಸೀದಿಯಿಂದ ಹಿಡಿದು, ಕಾರ್ಯಕ್ರಮ (ಲೆಕ್ಕದ ವರ್ಷ) ಮುಗಿದ ನಂತರ ಮಂಡಿಸಬೇಕಾದ (ಮಂಡಿಸಿದ) ಲೆಕ್ಕ ಪರಿಶೀಲನಾ ವರದಿಯವರೆಗೆ ಕಾಯ್ದುಕೊಳ್ಳಬೇಕಾದ (ಕಾಯ್ದುಕೊಂಡ) ಪಾರದರ್ಶಿಕತೆ-ಯಶಸ್ಸಿನ ಕಥೆ.

೩. ಹೊಗಳಿಕೆಗೆ ಬಾಯ್ಬಿಡದೆ, ತೆಗಳಿಕೆಗೆ ಅಂಜದೆ, ಶಾಲು-ಸನ್ಮಾನ, ಕ್ಯಾಮರಾ ಫೋಟೋಗಳ ಅವಾಂತರದಿಂದ ದೂರ ಸರಿದು, ಮುಂದಿನ ಉತ್ಸಾಹಿ ಪೀಳಿಗೆಯನ್ನು ಗುರುತಿಸುತ್ತಾ ಬಂದ ಪದಾಧಿಕಾರಿಗಳ ನಿಸ್ವಾರ್ಥ ದುಡಿಮೆ.

೪. ಸಂಸ್ಥೆ ನಡೆಸಿದ ಕಾರ್ಯಕ್ರಮಗಳ ಕುರಿತು, ಬಹು ಮುಂಚಿತವಾಗಿಯೇ ನೀಡುತ್ತಿದ್ದ ಮಾಹಿತಿ, ಮತ್ತು ಕಾರ್ಯಕ್ರಮದಲ್ಲಿ ನಿಗದಿತ ಸಮಯಕ್ಕೆ ಹಾಜರಿರುತ್ತಿದ್ದ ಪದಾಧಿಕಾರಿಗಳ ಶಿಸ್ತು ಮತ್ತು ಆತ್ಮವಿಶ್ವಾಸ.

ಇದಿಷ್ಟು ಹೇಳಿ, ಲಹರಿ ಸಂಸ್ಥೆಯು ಹಂತಹಂತವಾಗಿ ಬೆಳೆದು ಬಂದ ಘಟ್ಟಗಳನ್ನು ದಾಖಲಿಸಬಹುದು.

೧೯೮೬ರಿಂದ ಪ್ರತಿ ಶುಕ್ರವಾರ ಈಗಿನ 'ಚಿಂತನ ಮಂಥನ' ಮಾದರಿಯಲ್ಲಿಯೇ ಚರ್ಚೆಗಳು ವಿಚಾರ ವಿನಿಮಯಗಳು ನಿರಂತರವಾಗಿ ನಡೆದವು. ಪದಾಧಿಕಾರಿಗಳ ಆಯ್ಕೆಯೂ ಸರ್ವಾನುಮತದಿಂದ ಜರುಗಿ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಚುನಾವಣೆಯನ್ನು ನಡೆಸಲಾಯಿತು. ಹಣಕಾಸು ನಿರ್ವಹಣೆ ಸದಸ್ಯರ ವೈಯಕ್ತಿಕ ಬ್ಯಾಂಕ್ ಖಾತೆಗಳ ಮೂಲಕವೇ ನಡೆಯುತ್ತಿತ್ತು. ಮುಖ್ಯ ವಾಹಿನಿಯಾಗಿ 'ವಕೀಲರ ಸಂಘ' ಇದ್ದರೂ, ಅಲ್ಲಿ ನಡೆಸಲಾಗದಂತಹ ಕೆಲವು ಕಾರ್ಯಚಟುವಟಿಕೆಗಳನ್ನು ನಡೆಸಿ 'ಲಹರಿ' ಯನ್ನು ಒಂದು ಮಾದರಿ ಸಂಸ್ಥೆಯಾಗಿ ಬೆಳೆಸುವ ಉದ್ದೇಶದಿಂದ ಪಿಜಿಸಿ ಚಂಗಪ್ಪನವರ ಸಲಹೆಯ ಮೇರೆಗೆ ೧೯೮೮ರಲ್ಲಿ 'ಲಹರಿ ವಕೀಲರ ವೇದಿಕೆ' ಎಂಬ ಹೆಸರನ್ನು ನೀಡಿ ಸಂಸ್ಥೆಯನ್ನು 'ಸೊಸೈಟಿ ರಿಜಿಸ್ಟ್ರೇಷನ್ ಆ್ಯಕ್ಟ್' ಪ್ರಕಾರ ನೊಂದಾವಣೆ ಮಾಡಲಾಯಿತು. ವೃತ್ತಿ ಒಡ್ಡುತ್ತಿದ್ದ ಒತ್ತಡಗಳನ್ನು, ಏಕತಾನತೆಯನ್ನು ನಿವಾರಿಸಿಕೊಳ್ಳಲು 'ಲಹರಿ ವಕೀಲರ ವೇದಿಕೆ' ತನ್ನೆಲ್ಲ ಸದಸ್ಯರಿಗೆ ವಿಸ್ತೃತ ಸಾಮಾಜಿಕ ಸಾಂಸ್ಕೃತಿಕ ಆಯಾಮಗಳನ್ನು ಒದಗಿಸಿತು.

ನ್ಯಾಯಾಂಗ ಅಧಿಕಾರಿಗಳ ಆಯ್ಕೆ ಪರೀಕ್ಷೆಗೆ ಕುಳಿತುಕೊಳ್ಳುವರಿಗೆ ಪ್ರಪ್ರಥಮ ಬಾರಿಗೆ ಪರೀಕ್ಷಾ ಪೂರ್ವ ತರಬೇತಿಯನ್ನು ಆಯೋಜಿಸಿದ ಕೀರ್ತಿ ಲಹರಿಯದೇ ಎಂಬುದು ಹೆಗ್ಗಳಿಕೆಯ ಸಂಗತಿ. ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸಗಳನ್ನು ಏರ್ಪಡಿಸುತ್ತಾ ವೃತ್ತಿಯಿಂದ ದಣಿದ ವಕೀಲರ ಮೈಮನಗಳಿಗೆ ಮುದ ನೀಡಲಾಯಿತು. ಚಿತ್ರಕಲಾ ಪರಿಷತ್ತಿನ ಸಹಯೋಗದಲ್ಲಿ ವಕೀಲರ ಮಕ್ಕಳಿಗೆ ಸ್ಥಳದಲ್ಲೇ ಚಿತ್ರ ರಚಿಸುವ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ಇದುವರೆಗೆ ಏಳೆಂಟು ಬಾರಿ 'ಪುಸ್ತಕ ಮೇಳ' ವನ್ನು ನಡೆಸಿ (ಕಾನೂನೇತರ ಗ್ರಂಥಿಗಳು) ವಕೀಲರಲ್ಲಿ ಕೊಂಡು ಓದುವ ಹವ್ಯಾಸವನ್ನು ಬೆಳೆಸಿದ ಕೀರ್ತಿಯೂ ಲಹರಿ ಸಂಸ್ಥೆಯದೇ.

ಉದಾತ್ತವಾದ ಧ್ಯೇಯದಿಂದ ಅಸ್ತಿತ್ವಕ್ಕೆ ಬಂದ ಲಹರಿಯ ಮತ್ತೊಂದು ಅಂಗಸಂಸ್ಥೆ 'ಲಹರಿ ಫೌಂಡೇಷನ್' (ಟ್ರಸ್ಟ್). ಸಹೋದ್ಯೋಗಿಗಳ ಬಗ್ಗೆ ಮಾನವೀಯ ಅನುಕಂಪ ಮತ್ತು ಔದಾರ್ಯ ದೃಷ್ಟಿಯುಳ್ಳ ವಕೀಲರು ನೀಡಿದ ವಂತಿಕೆಯನ್ನು 'ಇಡುಗಂಟಾಗಿ'ಟ್ಟು (Corpus fund) ಬೆಳೆಸಿ, ಅದರಿಂದ ಬರುವ ಬಡ್ಡಿಯ ಹಣದಿಂದ ಖಾಯಿಲೆ, ಅಥವಾ ಅಪಘಾತಕ್ಕೀಡಾಗಿ ಸಂಕಷ್ಟದಲ್ಲಿರುವ ವಕೀಲ ಮಿತ್ರರಿಗೆ ಆರ್ಥಿಕ ನೆರವನ್ನು ನೀಡಲಾಗುತ್ತದೆ. ಇದುವರೆಗೆ ೪೨ ವಕೀಲರು ಯೋಜನೆಯ ಫಲಾನುಭವಿಗಳು. ಒಟ್ಟು ರೂ. ೧,೫೦,೦೦೦/- ಆರ್ಥಿಕ ನೆರವನ್ನು ನೀಡಲಾಗಿದೆ.

ಇನ್ನು ಕಾನೂನಿನ ಪಾಂಡಿತ್ಯವೇ ವಕೀಲಿ ವೃತ್ತಿಯ ಜೀವಾಳ. ಈ ವಿಷಯದಲ್ಲಿ ಲಹರಿ ಹಿಂದಿನಿಂದಲೂ ಮುಂದೇ. ತನಗೆ ತಾನೇ ಸಾಟಿ ಎಂಬಂತೆ 'ಶೈಕ್ಷಣಿಕ ಅಭಿಯಾನ'ಕ್ಕೆ ಉದಾಹರಣೆ: ೧೯೯೭ರಿಂದ ಇದುವರೆಗೆ ಸುಮಾರು ೧೩ ಅಣಕು ನ್ಯಾಯಾಲಯ ಸ್ಪರ್ಧೆಗಳನ್ನು ನಡೆಸಲಾಗಿದೆ. ಅದರಲ್ಲೂ ಲಹರಿಯ ಈ ಸ್ಪರ್ಧೆ ಕಾಲ್ಪನಿಕ ಪ್ರಕರಣಗಳಾಗಿರದೆ, ಜೀವಂತ ಕೇಸುಗಳೇ (live case) ಎಂಬುದರಿಂದ ಅದರ ಹಿಂದಿನ ಪರಿಶ್ರಮ ಅರ್ಥವಾದೀತು. ಸುಮಾರು ೬೦೦ ಮಂದಿ ಸ್ಪರ್ಧಿಗಳು ಈ ಸ್ಪರ್ಧೆಯಲ್ಲಿ ಭಾಗಿಯಾಗಿದ್ದಾರೆ.

ಇದುವರೆವಿಗೆ ನಡೆಸುತ್ತಾ ಬಂದ ಪುಸ್ತಕ ಪ್ರದರ್ಶನಗಳು - ಕೊಂಡು ಓದುವ ಚಳವಳಿಗಳಲ್ಲಿ ಭಾಗಿಯಾದ ತೃಪ್ತಿ.

ಲಹರಿಯು ಪರೀಕ್ಷಾಪೂರ್ವ ತರಬೇತಿ ಪಡೆದು ಇಂದು ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಧೀಶರ ಸಂಖ್ಯೆ ನೂರಕ್ಕೂ ಅಧಿಕ.

> ೨೫ ವರ್ಷಗಳ ಹಿಂದೆ ಹುಟ್ಟಿದ 'ಲಹರಿ' ಈಗ 'ಬೆಳ್ಳಿ' ಬೆಳಕಿನಲ್ಲಿ ಹೊಳೆಯುತ್ತಿದೆ. 'ಲಹರಿ' ಸಂಸ್ಥೆ ಒಂದು ಚಳವಳಿಯಾಗಿದೆ, ಸದಸ್ಯರೆಲ್ಲ ಸೇರಿ 'ಲಹರಿ' ಪರಿವಾರವಾಗಿದೆ. ಸದಸ್ಯರನ್ನು 'ಲಹೆರಿಯನ್' ಎಂದು ಕರೆಯುವಷ್ಟು ವಕೀಲರ ಸಮೂಹದಲ್ಲಿ ಪ್ರಖ್ಯಾತವಾಗಿದೆ. ಈ ಸಂದರ್ಭದಲ್ಲಿ ವಿಶೇಷ ಲೇಖನ ಮಾಲೆ ಆರಂಭಿಸಿದವರು, **ಸೂತ್ರಧಾರ ರಾಮಯ್ಯ**. ಮಾಲೆಯ ಮೊದಲನೆ ಕಂತಿದು.
>
> -ಸಂ.

ಸಂವಿಧಾನಿಕ ನ್ಯಾಯ, ನಾಗರಿಕ ಮತ್ತು ದಂಡಕ್ರಿಯಾ ಸಂಹಿತೆ, ಸೈಬರ್ ಲಾ, ಮಧ್ಯಸ್ಥಿಕೆ, ಸಂಧಾನ ವ್ಯವಹರಣೆ ಮತ್ತು ನ್ಯಾಯಿಕ ಸಂಚಲನೆ ಕುರಿತ ಕಾರ್ಯಾಗಾರಗಳನ್ನು ಸಂಘಟಿಸಿದ್ದು, ಲಹರಿಯ ಹಿರಿಮೆ.

ಹಿಂದು ಲಾ ಮತ್ತು ಆಡಳಿತಾತ್ಮಕ ನ್ಯಾಯವನ್ನು ಕುರಿತ ಪ್ರತಿಭಾ ಶೋಧ ಕಾರ್ಯಗಾರಗಳ ಏರ್ಪಾಡು, ಲಹರಿಯ ಗರಿಮೆ.

ಬೃಹತ್ ಪ್ರಮಾಣದಲ್ಲಿ ನಡೆಸಲಾದ ಲಾ ಲೆಕ್ಚರ್ಸ್, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನೊಳಗೊಂಡಂತೆ ೨೫ ಲೆಕ್ಚರ್ಸ್‌ಗಳ ಪೈಕಿ ೧೦ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗಿದೆ.

ವಕೀಲರ ಪರಿಷತ್, ವಕೀಲರ ಸಂಘ ಮತ್ತು ಲಹರಿ ವಕೀಲರ ವೇದಿಕೆಯ ಸಂಯುಕ್ತಾಶ್ರಯದಲ್ಲಿ ಮೊದಲ ಬಾರಿಗೆ ಹದಿನೈದು ದಿನಗಳು ಸಹಾಯಕ ಸರ್ಕಾರಿ ಅಭಿಯೋಜಕರಿಗೆ ತರಬೇತಿ ಕಾರ್ಯಾಗಾರವನ್ನು ನಡೆಸಲಾಗಿದೆ.

ಸಮಸ್ಥ ವಕೀಲರಿಗೆ ಉಪಯುಕ್ತವೆಂಬುದಾಗಿ ಹೆಸರುವಾಸಿಯಾದ 'ಚಿಂತನ ಮಂಥನ' ಕಾರ್ಯಕ್ರಮವಂತೂ ಅಭೂತಪೂರ್ವ ಯಶಸ್ಸಿನಿಂದ ನೂರರ ಗಡಿಯನ್ನು ದಾಟಿದೆ.

ಮುಂದುವರಿಯುವುದು

**ಕಾರಣಾಂತರಗಳಿಂದ ಈ ತಿಂಗಳು 'ಪ್ರಚಲಿತ' ಇಲ್ಲ. ದಯವಿಟ್ಟು ಸಹಕರಿಸಿ. -ಸಂ.**

ನಿರೀಕ್ಷಿಸಿ...

## ಕೆನಡಾದಲ್ಲೊಬ್ಬ ಕನ್ನಡಿಗ

ಪತ್ರಿಕೆಯ ಮಾಜಿ ಸಂಪಾದಕ, ಶ್ರೀ ಜಿ.ಎಸ್. ನಟರಾಜ್ ಕೆನಡಾದಲ್ಲಿ ಮೂವತ್ತು ದಿನಗಳನ್ನು ಕಳೆದು ಬಂದಿದ್ದಾರೆ. ಪತ್ರಿಕೆಯ ಕೋರಿಕೆಯಂತೆ ಅಲ್ಲಿನ ನ್ಯಾಯಾಲಯಗಳಿಗೆ ಭೇಟಿಯಿತ್ತು ಅಲ್ಲಿನ ಕಾರ್ಯ ಚಟುವಟಿಕೆಗಳ ಟಿಪ್ಪಣಿ ತಂದಿದ್ದಾರೆ. ಅಲ್ಲಿ ವಕಾಲತ್ತು ಮಾಡುತ್ತಿರುವ ಹಲವು ಬೆಂಗಳೂರಿನ ವಕೀಲರನ್ನೂ ಭೇಟಿಯಾಗಿದ್ದಾರೆ.

ಮುಂದಿನ ತಿಂಗಳಿನಿಂದ ಪ್ರಾರಂಭವಾಗುವ ತಮ್ಮ ಪ್ರವಾಸ ಕಥನದ ಅಂಕಣ 'ಕೆನಡಾದಲ್ಲೊಬ್ಬ ಕನ್ನಡಿಗ'ದಲ್ಲಿ ನಟರಾಜನ್ ತಮ್ಮ ಕೆನಡಾದ ಅನುಭವ ಹಂಚಿಕೊಳ್ಳಲಿದ್ದಾರೆ.

ಸಂ.

# ರಾಜೇಶನ ರಗಳೆಗಳಿಗೊಂದು ಸುಖಾಂತ್ಯ

## Just ಮಾತ್ ಮಾತಲ್ಲ...

ರಾಜೇಶ್ ಕಿರಿಯ ಹಾಗೂ ಮುದ್ದು ಮಗ. ಅವನ ಅಣ್ಣ, ಸಹೋದರಿಯರೆಲ್ಲರೂ ಸುಖ ಸಂಸಾರ ನಡೆಸುತ್ತಿದ್ದಾರೆ. ತಂದೆ ದಿನಸಿ ವ್ಯಾಪಾರಿ. ಆತನ ನಂತರ ತಾಯಿ ದಿನಸಿ ವ್ಯಾಪಾರವನ್ನು ಮುಂದುವರೆಸಿದಳು. ತನ್ನ ಶ್ರಮದಿಂದ ಮಕ್ಕಳೆಲ್ಲರನ್ನೂ ಓದಿಸಿ, ಮದುವೆ ಮಾಡಿಸಿದಳು. ಅಷ್ಟೇ ಅಲ್ಲ ಎರಡು ಸ್ಥಿರ ಆಸ್ತಿ ಮತ್ತು ಹಲವು ಲಕ್ಷ ರೂಪಾಯಿ ಠೇವಣಿಗಳ ಒಡತಿಯಾದಳು.

ರಾಜೇಶ್ ನಿರುದ್ಯೋಗಿ ಮತ್ತು ಬೇಜವಾಬ್ದಾರಿಯುತ. ತನ್ನ ದುರ್ವರ್ತನೆಯಿಂದ ದಿನಸಿ ವ್ಯಾಪಾರವನ್ನು ಮುಂದುವರೆಸಲಾಗಲಿಲ್ಲ. ಸಹೋದರ ಸಹೋದರಿಯರೊಂದಿಗೆ ವೈಷಮ್ಯ ಮಾಡಿಕೊಂಡು ಅವರನ್ನು ಮನೆಗೆ ಸೇರಿಸುತ್ತಿರಲಿಲ್ಲ. ಇದೇ ಕೊರಗಿನಿಂದಲೇ ತಾಯಿ ನರಳಿ ಪ್ರಾಣ ಬಿಟ್ಟಳು. ತಾಯಿಯ ಮರಣದ ವಿಷಯವನ್ನು ಸಹೋದರಿಯರಿಂದ ಮುಚ್ಚಿಡಲು ಪ್ರಯತ್ನಿಸಿ ಶವವನ್ನು ನೋಡಲು ಬಂದಾಗ ಅವಾಚ್ಯ ಶಬ್ದಗಳಿಂದ ನಿಂದಿಸಿ ಹೊರಗಟ್ಟಿದ. ರಾಜೇಶ್ ಮತ್ತು ಸಹೋದರಿಯರ ಮಧ್ಯೆ ಇದ್ದ ಬಾಂಧವ್ಯ ಮುರಿದು ಹೋಗಿ, ಇವನಿಗೆ ಬುದ್ಧಿ ಕಲಿಸಲು ಸಹೋದರಿಯರು ಪಣತೊಟ್ಟರು. ಪರಿಣಾಮವಾಗಿ ಆಸ್ತಿಯಲ್ಲಿ ಭಾಗಕ್ಕಾಗಿ ದಾವೆ ಹೂಡಿದರು.



ಎಸ್.ಎನ್. ಪ್ರಶಾಂತ ಚಂದ್ರ
snpchandra@gmail.com

ಮೊದಲಿನ ಹಂತದಲ್ಲಿಯೇ ಪ್ರಕರಣವನ್ನು ಮಧ್ಯಸ್ಥಿಕೆ ಕೇಂದ್ರಕ್ಕೆ ವರ್ಗಾಯಿಸಲಾಯಿತು. ಮಧ್ಯಸ್ಥಿಕೆ ಪ್ರಕ್ರಿಯೆಯಲ್ಲಿ ಉಭಯ ಪಕ್ಷಗಾರರಲ್ಲಿ ಉದ್ವೇಗ, ಆವೇಶ ಇದ್ದ ಕಾರಣ ಘರ್ಷಣೆ ಉಂಟಾಗಿ ಪ್ರಕ್ರಿಯೆ ಸುಲಲಿತವಾಗಿ ಸಾಗಲಿಲ್ಲ. ಪಕ್ಷಗಾರರಿಗೆ ಹಿರಿಯ ಅಣ್ಣನ ಮೇಲೆ ಗೌರವವಿತ್ತು. ಆದರೆ ಆತ ತಟಸ್ಥನಾಗಿ ಮೌನಕ್ಕೆ ಶರಣಾಗಿದ್ದ. ಆರೋಪ, ಪ್ರತ್ಯಾರೋಪ, ಕೋಪ, ರೋದನದ ಮಧ್ಯೆ ಯಾವುದೇ ನಿರ್ಣಯ, ಒಂದು ಸವಾಲೇ ಆಗಿತ್ತು. ರಾಜೇಶ್‌ನ ದುವರ್ತನೆ ಪಕ್ಷಗಾರರ ನಡುವಿನ ಚರ್ಚೆಯ ವಿಷಯವಾಗಿತ್ತು. ಹಲವಾರು ಹಂತದ ಚರ್ಚೆಯ ನಂತರ ಪಕ್ಷಗಾರರು ಚರ ಮತ್ತು ಸ್ಥಿರ ಆಸ್ತಿಗಳನ್ನು ಸಮನಾಗಿ ಹಂಚಿಕೊಳ್ಳಲು ನರ್ಣಯಿಸಿದರು. ಸಹೋದರರ ಸ್ವಂತ ಗಳಿಕೆಯ ಆಸ್ತಿಗಳನ್ನು ಅವರವರಿಗೆ ಬಿಟ್ಟು ಕೊಡಲು ಒಪ್ಪಿಕೊಂಡರು. ಪಕ್ಷಗಾರರ ನಿರ್ಣಯದಂತೆ ರಾಜೀ ಸೂತ್ರಕ್ಕೆ ಸಹಿ ಹಾಕಲು ಮುಂದಿನ ದಿನಾಂಕವನ್ನು ನಿಗದಿ ಪಡಿಸಲಾಯಿತು.

ಸಂಧಾನದ ನಂತರ ಪಕ್ಷಗಾರರಿಗೆ ಸಿಕ್ಕ ನೆಮ್ಮದಿ, ಸಮಾಧಾನಕ್ಕಿಂತ ನನಗೆ ನನ್ನ ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದ ತೃಪ್ತಿಯೆ ದೊಡ್ಡದಾಗಿತ್ತು.

ಆ ಸಮಯದಲ್ಲಿ ರಾಜೇಶ್ ನನ್ನ ಬಳಿ ಗುಟ್ಟಾಗಿ ಬಂದು ತನ್ನ ಹಿರಿಯ ಅಕ್ಕನಿಗೆ ತಾನು ಹಿಂದೆ ೨೫,೦೦೦ ರೂ. ಹಣವನ್ನು ಸಾಲವಾಗಿ ನೀಡಿದ್ದೇನೆಂದು ಮತ್ತು ತನ್ನ ಪಾಲಿನ ಆಸ್ತಿಯ ಎಲ್ಲಾ ಮೂಲ ಪತ್ರಗಳು ಆಕೆ ಬಳಿ ಕೊಟ್ಟಿದ್ದೇನೆಂದು, ಅವುಗಳನ್ನು ಹಿಂದೆ ಕೊಡಿಸಬೇಕೆಂದು ಹೊಸದಾಗಿ ರಗಳೆ ತೆಗೆದ. ಈ ಪ್ರಸ್ತಾಪದಿಂದ ನನಗೆ ಆಶ್ಚರ್ಯವಾಯಿತು. ಈ ವಿಷಯವನ್ನು ಮತ್ತೆ ನಾನು ಪ್ರಸ್ತಾಪಿಸಿದಲ್ಲಿ ರಾಜಿ ಪ್ರಯತ್ನವು ಮುರಿದು ಬೀಳುವ ಸಾಧ್ಯತೆಯೇ ಜಾಸ್ತಿ ಇತ್ತು. ಆದರೂ ಸ್ವಲ್ಪ ಯೋಚಿಸಿ ಈ ಪ್ರಸ್ತಾಪವನ್ನು ಹಿರಿಯ ಅಕ್ಕನಿಗೆ ನನ್ನದೇ ರೀತಿಯಲ್ಲಿ ವಿಷದ ಪಡಿಸಿದೆ. ಆಕೆ ಮೊದಲಿಗೆ ಕೋಪ ಮತ್ತು ಉದ್ವೇಗದಿಂದ ಪ್ರತಿಕ್ರಿಯಿಸಿದರೂ ನಂತರ ಒಪ್ಪಿ ಸೂಕ್ತ ಸಮಯದಲ್ಲಿ ಹಿಂದಿರುಗಿಸುವುದಾಗಿ ಭರವಸೆ ಕೊಟ್ಟಳು.

ರಾಜಿ ದಿವಸವನ್ನು ಈ ಮೊದಲೇ ನಿಗದಿ ಪಡಿಸಿದಂತೆ ಪಕ್ಷಗಾರರು ಬಂದರು. ರಾಜಿ ಪತ್ರವನ್ನು ಸಹ ಸಿದ್ಧಪಡಿಸಲಾಯಿತು. ರಾಜೇಶ್ ಪ್ರಸ್ತಾಪಿಸಿದ ವಿಷಯ ಅವರಿಬ್ಬರ ನಡುವಿನ ಮೌಖಿಕ ಒಪ್ಪಂದವಾದ್ದರಿಂದ, ರಾಜಿ ಪತ್ರದಲ್ಲಿ ನಮೂದಿಸಿರಲಿಲ್ಲ. ರಾಜಿ ಪತ್ರಕ್ಕೆ ಎಲ್ಲರೂ ಸಹಿ ಹಾಕಿದರು. ರಾಜೇಶ್ ಸಹಿ ಹಾಕುವ ಮೊದಲು ನನ್ನ ಕಡೆ ನೋಡಿದ. ನಾನು ಕಣ್ಣಲ್ಲೇ ಭರವಸೆ ನೀಡಿದೆ. ರಾಜಿ ಪತ್ರಕ್ಕೆ ಸಹಿ ಹಾಕಿದ ನಂತರ ನಾನು ಹಿರಿಯ ಅಕ್ಕನಿಗೆ ನೆನಪಿಸಿದೆ. ಆಕೆ ಒಂದು ಚೀಲವನ್ನು ತೋರಿಸಿ, ಅದರಲ್ಲಿರುವ ಹಣ ಮತ್ತು ಪತ್ರಗಳನ್ನು ನೋಡುವಂತೆ ನನಗೆ ಒತ್ತಾಯಿಸಿದಳು. ಅದರಲ್ಲಿ ೧,೨೫,೦೦೦/– ರೂ. ಹಣ, ಆಸ್ತಿಯ ಮೂಲ ಪತ್ರಗಳು, ರಾಜೇಶ್‌ನ ಮಾರ್ಕ್ಸ್ ಕಾರ್ಡ್, ಪಾಸ್ ಬುಕ್, ಪಾಸ್‌ಪೋರ್ಟ್, ಕ್ರೆಡಿಟ್ ಕಾರ್ಡ್, ವಗೈರೆಗಳು ಇದ್ದವು. ಅಕ್ಕ ತಮ್ಮಂದಿರ ನಡುವೆ ಬಾಂಧವ್ಯ ಚೆನ್ನಾಗಿದ್ದಾಗ, ಆತ ಆಕೆಯಲ್ಲಿ ಹಲವಾರು ದಾಖಲೆಗಳನ್ನು ಮತ್ತು ಕೊಟ್ಟ ಹಣದ ಮೊತ್ತ ಆತನಿಗೆ ನೆನಪಿರಲಿಲ್ಲ. ಅಕ್ಕ ಅವೆಲ್ಲವನ್ನು ಹಿಂದಿರುಗಿಸಿದಾಗಲೇ ಅವನಿಗೆ ಅದೆಲ್ಲಾ ನೆನಪಾಯಿತು. ರಾಜೇಶನ ನಿರ್ಲಕ್ಷತನ, ಅಹಂ, ಸೋಮಾರಿತನವನ್ನು ಬಿಟ್ಟು, ಜವಾಬ್ದಾರಿಯುತನಾಗಿ ಬಾಳಲೆಂದು ಹಾಗೂ ತಂದೆ–ತಾಯಿಯ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಸಹ ಸಮಪಾಲು ಇದೆಯೆಂದು ತೋರಿಸಲು ಈ ರೀತಿ ದಾವೆ ಹಾಕಿದ್ದೇವೆ ಎಂದು ಹೇಳಿ ತಮ್ಮನಿಗೆ ಪ್ರೀತಿಯಿಂದ ಬೆನ್ನಿಗೆ ಗುದ್ದಿದಳು. ರಾಜೇಶ್ ಗಳಗಳನೆ ಅತ್ತು, ತಪ್ಪಾಯ್ತು ಎಂದು ಅಕ್ಕಂದಿರಲ್ಲಿ ಬೇಡಿಕೊಂಡ.

ಕೋಣೆಯಿಂದ ಹೊರನಡೆದ ರಾಜೇಶ್ ಮತ್ತೆ ಬಂದು ತನ್ನ ಕೈ ಚೀಲದಿಂದ ತಾಯಿಯ ೨–೩ ಹೊಸ ಬ್ಯಾಂಕ್ ಠೇವಣಿ ತಂದು ಇವುಗಳನ್ನು ಸಹ ರಾಜಿ ಪತ್ರದಲ್ಲಿ ಸೇರಿಸಿ ಎಲ್ಲರಿಗೂ ಸಮಪಾಲನ್ನು ನೀಡಿ ಎಂದು ತಿಳಿಸಿದ. ಅದರಂತೆ ರಾಜಿ ಪತ್ರವನ್ನು ತಿದ್ದಿ ಹೊಸದಾದ ಠೇವಣಿಗಳನ್ನು ಪರಿಚ್ಛೇದದಲ್ಲಿ ಸೇರಿಸಲಾಯಿತು. ಕೇವಲ ಆರೇ ತಿಂಗಳಲ್ಲಿ ದಾವೆಯನ್ನು ಇತ್ಯರ್ಥಗೊಳಿಸಲಾಯಿತು.

ಮಾತು ಕತೆಯೆಲ್ಲಾ ಮುಗಿದು ರಾಜಿ ಪತ್ರಕ್ಕೆ ಸಹಿ ಮಾಡಿದಾಗ ರಾತ್ರಿ ಸುಮಾರು ೮ ಘಂಟೆಯಾಗಿತ್ತು. ಬೇರೆ ಬೇರೆಯಾಗಿ ಬಂದಿದ್ದ ಪಕ್ಷಗಾರರಿಗೆ, ಸಮಾಧಾನಕರ ಪರಿಹಾರ ದೊರೆತು, ಸಂಘರ್ಷ ಸಂಪೂರ್ಣವಾಗಿ ಶಮನವಾಗಿ ಬಾಂಧವ್ಯ ಮರುಕಳಿಸಿ, ನಗುನಗುತ್ತಾ ಹಿಂದಿರುಗಿದರು. ಪಕ್ಷಗಾರರು ನನಗೆ ಧನ್ಯವಾದಗಳನ್ನು ಹೇಳಲು ಮರೆಯಲಿಲ್ಲ. ತಡವಾಗಿದ್ದರಿಂದ ರಾಜೇಶ್ ಸಹೋದರಿಯರನ್ನು ತಾನೇ ಅವರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟನು. ನನಗಾಗಿದ್ದ ದಣಿವು, ಹಸಿವು ಸಂಪೂರ್ಣವಾಗಿ ಮಾಯವಾಗಿತ್ತು.

ಮಧ್ಯಸ್ಥಿಕೆ ಕೇಂದ್ರದಿಂದ ಎಂದಿನಂತೆ ಕಛೇರಿಗೆ ಹೋಗದೆ ನೇರವಾಗಿ ಮನೆಯ ಕಡೆ ತೆರಳಿದೆ. ಮನಸ್ಸಿನಲ್ಲಿ ಏನೋ ಒಂದು ನೆಮ್ಮದಿ ಮತ್ತು ಸಮಾಧಾನ. ಪಕ್ಷಗಾರರಿಗೆ ಸಿಕ್ಕ ನೆಮ್ಮದಿ, ಸಮಾಧಾನಕ್ಕಿಂತ ನನಗೆ ನನ್ನ ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದ ತೃಪ್ತಿಯೆ ದೊಡ್ಡದಾಗಿತ್ತು. ■

ನಿರೀಕ್ಷಿಸಿ...

## ಆಲಿಸಿ ನೋಡು... ಪಾಲಿಸಿ ನೋಡು...

ಇದು ನಮ್ಮ ಹೊಸ ಅಂಕಣ. ಬರಹ ಶ್ರೀ ಎಸ್.ಎನ್. ಪ್ರಶಾಂತ್ ಚಂದ್ರರದ್ದು. ಚಿತ್ರಗಳು ಶ್ರೀ ಡಿ.ಎಂ. ಹೆಗಡೆಯವರವು.



'ಲಹರಿ'ಯ ರಚನಾತ್ಮಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹಿಸುತ್ತಿದ್ದ ಹಲವು ವಕೀಲರು–ನ್ಯಾಯಾಧೀಶರು 'ಯುವ ವಕೀಲರ ತರಬೇತಿಗಾಗಿ ನೀವೇನಾದರೂ ಮಾಡಬಾರದೆ?' ಎಂದು ಕೇಳುತ್ತಿದ್ದರು. ಹಲವು ಬಾರಿ ಈ ಪ್ರಶ್ನೆ ಯುವ ವಕೀಲರು ಕೋರ್ಟ್ ರೂಮಿನಲ್ಲಿ ವ್ಯವಹರಿಸುವ ರೀತಿಗೆ ಸಂಬಂಧ ಪಟ್ಟಿರುತ್ತಿತ್ತು. ಉದ್ದುದ್ದ ಭಾಷಣಗಳನ್ನು, ಉಪನ್ಯಾಸಗಳನ್ನು ಕೇಳುವ ತಾಳ್ಮೆ ಯಾರಿಗೂ ಇಲ್ಲ. ಹೀಗಾಗಿ ಪ್ರಶಾಂತ ಚಂದ್ರ ಕಂಡುಕೊಂಡದ್ದು – ಚುಟುಕು ವಾಕ್ಯಗಳಲ್ಲಿ ಯುವ ವಕೀಲರಿಗೆ ಬೋಧಪ್ರದ ವಿಷಯಗಳನ್ನು ಹೇಳುವ ವಿಧಾನ. ಚುಟುಕು ವಾಕ್ಯಗಳಿಗೆ ಸಾಥಿ ಕೊಡಲಿದ್ದಾರೆ, ಹೆಗಡೆಯವರ 'ಉದ್ದ ಮೂಗಣ್ಣ, ಮೂಗಮ್ಮ'ರು. ಈ ಅಂಕಣಕ್ಕೊಂದು ಸೂಕ್ತ ಶೀರ್ಷಿಕೆ ಹುಡುಕಿ ಕೊಟ್ಟವರು 'ಪನ್' ಖ್ಯಾತಿಯ ಸೂತ್ರಧಾರ ರಾಮಯ್ಯ.



ನಿರೀಕ್ಷಿಸಿ ಮುಂದಿನ ತಿಂಗಳಿನಿಂದ. ಸಂ.

## 'ಹೆಂಗಸರು ನ್ಯಾಯಾಧೀಶರಾಗುವಂತಿಲ್ಲ' ಫತ್ವಾ

'ಇಸ್ಲಾಂ ಕಾನೂನಿನಂತೆ ಹೆಂಗಸರು ನ್ಯಾಯಾಧೀಶರಾಗುವಂತಿಲ್ಲ' ಎಂದು ಮುಸಲ್ಮಾನರ ದೇವ್ ಬಂದ್ ಪಂಥದ ಸಂಸ್ಥೆ ದಾರುಲ್ ಉಲೂಮ್ ಫತ್ವಾ ಹೊರಡಿಸಿದೆ.

ದಾರುಲ್ ಉಲುಮ್‌ನ ಅಂಗ ಸಂಸ್ಥೆ ದಾರುಲ್ ಇಫ್ತಾ (ನ್ಯಾಯಿಕ ವಿಭಾಗ) ತನ್ನ ಫತ್ವಾ ಸಂಖ್ಯೆ ೨೪೪೨೭ ರಂತೆ 'ಹೆಂಗಸು ನ್ಯಾಯಾಧೀಶಳಾಗುವುದು ಹದಿತ್ ಕಾನೂನಿಗೆ ವಿರೋಧ' ಎಂದಿದೆ.

ಈ ದೃಷ್ಟಿ ಕೋನಕ್ಕೆ ಮುಸಲ್ಮಾನರ ಪಂಗಡದಲ್ಲೆ ವಿರೋಧ ವ್ಯಕ್ತವಾಗಿದೆ. ಇದು 'ಮಹಿಳಾ ವಿರೋಧಿ' ಎಂದಿದೆ ವಿರೋಧಿಗಳ ಗುಂಪು. ಅಖಿಲ ಭಾರತ ಮುಸ್ಲಿಂ ಮಹಿಳಾ ವೈಯಕ್ತಿಕ ಕಾನೂನು ಮಂಡಳಿಯ ಅಧ್ಯಕ್ಷೆ ಶ್ವೇಸ್ತಾ ಅಂಬರ್ ಈ ಫತ್ವಾವನ್ನು ಪ್ರಶ್ನಿಸಿ, "ಹದಿತ್ ಕಾನೂನಿನಲ್ಲಿ ಹಾಗಿದ್ದರೂ ಅದನ್ನು ಈಗ ಜಾರಿಗೊಳಿಸಲು ಸಾಧ್ಯವಿಲ್ಲ" ಎಂದಿದ್ದಾರೆ.

## ಪಾಕ್ ಸೆರೆಮನೆಯಲ್ಲಿ ನೂರಾರು ಭಾರತೀಯರು

ಆಗಸ್ಟ್ ೫ ರಂದು ಸರಕಾರ ರಾಜ್ಯಸಭೆಯಲ್ಲಿ ಬಹಿರಂಗಪಡಿಸಿದಂತೆ ಪಾಕ್ ಸೆರೆಮನೆಯಲ್ಲಿ ೭೯೩ ಭಾರತೀಯರು ಕೊಳೆಯುತ್ತಿದ್ದಾರೆ. ಅವರಲ್ಲಿ ಆಕಸ್ಮಿಕವಾಗಿ ಸಮುದ್ರದಲ್ಲಿ ಗಡಿ ದಾಟಿದ ೫೮೩ ಮೀನುಗಾರರು. ಮತ್ತಿನ್ನಿತರರು ಸಾಮಾನ್ಯ ನಾಗರೀಕರು. ಇವರಲ್ಲಿ ಕೇವಲ ೩೩ ಜನರಿಗೆ ರಾಜತಾಂತ್ರಿಕ ಸಹಾಯ ಒದಗಿಸಲಾಗಿದೆ.

ಇಂಥ ಸಮಸ್ಯೆಗಳನ್ನು ಆಗಾಗ ಪರಿಹರಿಸಲೆಂದು ಎರಡು ದೇಶಗಳಿಂದ ತಲಾ ನಾಲ್ಕರಂತೆ ಒಟ್ಟು ಎಂಟು ಜನ ನಿವೃತ್ತ ನ್ಯಾಯಾಧೀಶರನ್ನೊಳಗೊಂಡ ಇಂಡೊ–ಪಾಕ್ ಜ್ಯುಡಿಷಿಯಲ್ ಕಮಿಟಿಯನ್ನು ರಚಿಸಲಾಗಿದೆ.

ಹೊರರಾಜ್ಯದಿಂದ...

## ನ್ಯಾ|| ಪಿ.ಡಿ. ದಿನಕರನ್ : ಅಲ್ಲೂ ಅದೆ ಗತಿ

ಔಪಚಾರಿಕ ಸಮಾರಂಭಗಳಿಲ್ಲದೆ ಬೆಂಗಳೂರಿನಿಂದ ಹೊರಬಿದ್ದ ಮುಖ್ಯ ನ್ಯಾಯಮೂರ್ತಿ ಪೌಲ್ ಡೆನಿಯಲ್ ದಿನಕರನ್ ಪ್ರೇಂ ಕುಮಾರ್ ಸಿಕ್ಕಿಂನಲ್ಲೂ ಅಂಥದೆ ಸ್ವಾಗತ ಸ್ವೀಕರಿಸಬೇಕಾಯಿತು.

ಬೆಂಗಳೂರಿನಲ್ಲಿ ಬೆಂಗಳೂರು ವಕೀಲರ ಸಂಘ ಮತ್ತು ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಸಾಂಪ್ರದಾಯಿಕ ಮತ್ತು ಔಪಚಾರಿಕ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಿಲ್ಲ. ಅದರಂತೆಯೆ ಆಗಸ್ಟ್ ೯ ರಂದು ಸಿಕ್ಕಿಂ ರಾಜಧಾನಿ ಗ್ಯಾಂಗ್ ಟಾಕ್‌ನಲ್ಲಿ ನ್ಯಾ|| ದಿನಕರನ್ ಪ್ರಮಾಣವಚನ ಸ್ವೀಕರಿಸಿದಾಗ ಅಲ್ಲಿನ ವಕೀಲರ ಎರಡು ಸಂಘಗಳೂ ಸಮಾರಂಭವನ್ನು ಬಹಿಷ್ಕರಿಸಿದ್ದಾಗಿ ವರದಿಯಾಗಿದೆ. ಈ ಹಿಂದೆ ಮುಖ್ಯ ನ್ಯಾಯಮೂರ್ತಿ ಎಸ್.ಕೆ. ಜೈನ್ ನಿವೃತ್ತರಾದಾಗಲೂ ಬೆಂಗಳೂರು ವಕೀಲರ ಸಂಘ ಬೀಳ್ಕೊಡುಗೆ ಏರ್ಪಡಿಸದಿರಲು ನಿರ್ಧರಿಸಿತ್ತು.

ಕಾರ್ಪೋರೇಟ್ ರಂಗದಿಂದ...

## ಸುಭಿಕ್ಷಾ ವಿರುದ್ಧ ಎಸ್‌ಎಫ್‌ಐಒ ತನಿಖೆ

ಸುಭಿಕ್ಷಾ ಚಿಲ್ಲರೆ ವ್ಯಾಪಾರಿ ಮಳಿಗೆಗಳ ಕಂಪನಿಯ ವಿರುದ್ಧ ಕಂಪನಿ ಕಾಯ್ದೆಯ ಸೆ. ೨೩೫ ರಂತೆ ರಚಿಸಲಾಗಿರುವ ಸಿರಿಯಸ್ ಫ್ರಾಡ್ ಇನ್ವೆಸ್ಟಿಗೇಷನ್ ಆಫೀಸ್ ತನಿಖೆ ನಡೆಸುತ್ತಿದೆ.

ಕಂಪನಿಯ ಕೆಲ ಹೂಡಿಕೆದಾರರು ಮತ್ತು ನೌಕರರು ಚೆನ್ನೈನ ರೆಜಿಸ್ಟ್ರಾರ್ ಆಫ್ ಕಂಪನಿಗಳಿಗೆ ನೀಡಿದ ದೂರಿನ್ವಯ ಈ ಕ್ರಮ ಕೈಗೊಳ್ಳಲಾಗಿದೆ.

ಐಸಿಐಸಿಐ ವೆಂಚರ್ಸ್, ಸುಭಿಕ್ಷಾದಲ್ಲಿ ಎರಡನೆ ದೊಡ್ಡ ಹೂಡಿಕೆದಾರ ಕಂಪನಿ. ಸುಭಿಕ್ಷಾದಲ್ಲಿ ಐಸಿಐಸಿಐ ವೆಂಚರ್ಸ್ ಹೂಡಿಕೆ ಒಟ್ಟು ಹೂಡಿಕೆಯ ೨೩% ರಷ್ಟು. ಅವರೂ ಸಹಿತ ಸುಭಿಕ್ಷಾದ ವಿರುದ್ಧ ದೂರು ಸಲ್ಲಿಸಿದ್ದಾರೆ.

ವಿದೇಶದಿಂದ...

## ಪರ್ವೆಝ್ ಮುಶ್ರಫ್ 'ಘೋಷಿತ ಅಪರಾಧಿ'

ಇಲ್ಲಿ ಕೇಂದ್ರ ಮಂತ್ರಿ ವಿದೇಶದಲ್ಲಿ ಎಕ್ಸ್ ಪಾರ್ಟೆಯಾದರೆ ಅಲ್ಲಿ, ಪಾಕಿಸ್ಥಾನದಲ್ಲಿ ಮಾಜಿ ಅಧ್ಯಕ್ಷ ಪರ್ವೆಝ್ ಮುಶ್ರಫ್ ಸ್ವದೇಶದಲ್ಲೇ 'ಘೋಷಿತ ಅಪರಾಧಿ' (proclaimed offender) ಯಾಗಿದ್ದಾರೆ.

ಸಿಂಧ್ ಉಚ್ಚ ನ್ಯಾಯಾಲಯದ ದ್ವಿ ಸದಸ್ಯ ಪೀಠವೊಂದು, ಪ್ರಕರಣವೊಂದರಲ್ಲಿ ಮುಶ್ರಫರ ದೀರ್ಘಕಾಲೀನ ಅನುಪಸ್ಥಿತಿಯನ್ನು ಗಮನಿಸಿ ಈ ಆಜ್ಞೆ ಹೊರಡಿಸಿದೆ. ಅಧಿಕಾರ ತ್ಯಜಿಸಿದಾಗಿನಿಂದ ಮುಶ್ರಫ್ ಪಾಕಿಸ್ಥಾನದಿಂದ ಹೊರಗೆ ಉಳಿದಿದ್ದಾರೆ.

ಪಾಕ್ ಸಂವಿಧಾನದ ವಿರುದ್ಧ ಮುಶ್ರಫ್ ಅಪಚಾರವೆಸಗಿದ್ದಾರೆನ್ನುವುದು ಪ್ರಕರಣದ ತಿರುಳು. ವಕೀಲ ಮೌಲ್ವಿ ಇಕ್ಬಾಲ್ ಹೈದರ್ ದಾಖಲಿಸಿರುವ ಈ ಪ್ರಕರಣ ಮುಖ್ಯ ನ್ಯಾಯಮೂರ್ತಿ ಸರ್ಮದ್ ಜಲಾಲ್ ಉಸ್ಮಾನಿ ಮತ್ತು ಅವರ ಸಹ ನ್ಯಾಯಾಧೀಶರ ಪೀಠದ ಮುಂದೆ ಬಂದಾಗ ಈ ಆಜ್ಞೆ ಹೊರಡಿಸಲಾಗಿದೆ.

ಪ್ರಕರಣ ದಾಖಲಾಗಿರುವುದು ಪಾಕ್‌ನ ಹಿಂದಿನ ಅಧ್ಯಕ್ಷ ಪರ್ವೆಝ್ ಮುಶ್ರಫ್, ಅವರ ವಕೀಲ, ಷರೀಫುದ್ದೀನ್ ಪೀರ್‌ಜಾದಾ ಮತ್ತು ಮಾಜಿ ಅಟಾರ್ನಿ ಜನರಲ್ ಮಲಿಕ್ ಅಬ್ದುಲ್ ಖಯುಮ್ ಈ ಮೂವರ ವಿರುದ್ಧ. ಈ ಆಜ್ಞೆ ಮುಶ್ರಫ್ ಪಾಕ್ ರಾಜಕಾರಣಕ್ಕೆ ಮರಳುವ ಯತ್ನಕ್ಕೆ ಹಿನ್ನಡೆಯೆಂದು ವಿಶ್ಲೇಷಿಸಲಾಗುತ್ತಿದೆ.

ಪರಸ್ಥಳದಿಂದ...

## ವಕೀಲರ ಪ್ರತಿಭಟನೆ

ಆಗಸ್ಟ್ ೨೦ರ ರಾತ್ರಿಯಂದು ತರೀಕೆರೆಯಲ್ಲಿ ಸುರಿದ ಭಾರಿ ಮಳೆಗೆ ಅಲ್ಲಿನ ನ್ಯಾಯಾಲಯದ ಕಟ್ಟಡ ಜಲಾವೃತಗೊಂಡು, ನ್ಯಾಯಾಲಯದ ಕಟ್ಟಡಕ್ಕೆ ನೀರು ನುಗ್ಗಿ ಕಲಾಪಕ್ಕೆ ಅಡ್ಡಿಯಾಯಿತು.

ಮಳೆ ನೀರು ಹೋಗುವ ಚರಂಡಿಯನ್ನು ದುರಸ್ತಿಗೊಳಿಸದಿರುವುದೆ ಈ ಸ್ಥಿತಿಗೆ ಕಾರಣವೆಂದು ಆಕ್ರೋಶಗೊಂಡ ಸ್ಥಳೀಯ ವಕೀಲರು ಪಿಡಬ್ಲ್ಯುಡಿ ಕಛೇರಿಗೆ ಬೀಗ ಜಡಿದು ಪ್ರತಿಭಟಿಸಿದರು.

ಲೋಕಸಭೆಯಿಂದ...

## ಮರ್ಯಾದಾ ಹತ್ಯೆ ತಡೆಗೆ ಪ್ರತ್ಯೇಕ ಕಾನೂನು

ಸರಕಾರ ಲೋಕ ಸಭೆಗೆ ತಿಳಿಸಿದ ಪ್ರಕಾರ ಮರ್ಯಾದಾ ಹತ್ಯೆ ತಡೆಗೆ ವಿಶೇಷ ಕಾನೂನು ರೂಪಿಸಲು ಸರಕಾರ ಒಲವು ತೋರಿಸುತ್ತಿದೆ. ಈಗಾಗಲೆ ಈ ವಿಷಯಕ್ಕೆ ಸಂಬಂಧಿಸಿದಂತೆ ವರದಿ ಸಲ್ಲಿಸಲು ಮಂತ್ರಿಗಳ ಸಮೂಹ (Group of Ministers) ವನ್ನು ರಚಿಸಲಾಗಿದೆ. ಈ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲು ಸರಕಾರ ಉತ್ಸುಕವಾಗಿದೆ.

## ಮಂಪರು ಪರೀಕ್ಷೆ : ಪುನರ್ಪರಿಶೀಲನಾ ಅರ್ಜಿಗೆ ಸರಕಾರದ ಒಲವಿಲ್ಲ

ಆಗಸ್ಟ್ ೧೧ ರಂದು ಸರಕಾರ ಲೋಕಸಭೆಗೆ ತಿಳಿಸಿದಂತೆ ಸರಕಾರ ಮಂಪರು ಪರೀಕ್ಷೆಯ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಪುನರ್ಪರಿಶೀಲನಾ ಅರ್ಜಿ ಸಲ್ಲಿಸದಿರಲು ನಿಶ್ಚಯಿಸಿದೆ.

ಈ ಹಿಂದೆ ಸರ್ವೋಚ್ಚ ನ್ಯಾಯಾಲಯ ತನಿಖಾ ಸಂಸ್ಥೆಗಳು ನಡೆಸುವ ಮಂಪರು ಪರೀಕ್ಷೆ ಸಾಂವಿಧಾನಿಕವಾಗಿ ಸರಿಯಾದ ಕ್ರಮವೆ ಎಂಬ ಪ್ರಶ್ನೆಗೆ ಉತ್ತರಿಸುತ್ತಾ 'ಆರೋಪಿಯ ಅಥವಾ ಸಂಶಯಿತ ವ್ಯಕ್ತಿಯ ಅನುಮತಿ ಇಲ್ಲದೆ ನಡೆಸುವ ಮಂಪರು ಪರೀಕ್ಷೆ ಸಂವಿಧಾನ ಬಾಹಿರಕ್ರಮ' ಎಂದು ತೀರ್ಪು ನೀಡಿತ್ತು. ಈ ತೀರ್ಪು ತನಿಖಾ ಸಂಸ್ಥೆಗಳಿಗೆ ಹಿನ್ನಡೆ ಎಂದೂ ವಿಶ್ಲೇಷಿಸಲಾಗಿತ್ತು. ಆಧುನಿಕ ತಂತ್ರಜ್ಞಾನದ ಸಹಾಯದಿಂದ ನಡೆಸುವ ಇಂಥ ತನಿಖಾ ಪ್ರಕ್ರಿಯೆಯಿಂದ ಸತ್ಯ ಹೊರ ಬೀಳಲು ಸಾಧ್ಯ ಎಂದೂ ವಾದಿಸಲಾಗುತ್ತಿತ್ತು. ಹೀಗಾಗಿ ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನ ಮರುಪರಿಶೀಲನೆಗೆ ಕೋರಲು ಸರಕಾರದ ಮೇಲೆ ಒತ್ತಡವಿತ್ತು.

(ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನ ವಿವರಗಳಿಗೆ ನೋಡಿ ಕಮ್ಯುನಿಕ್ ಜೂನ್ ೨೦೧೦ರ ಸಂಚಿಕೆ)

## ವಿವಾಹೇತರ ಸಹಜೀವನ : ವಿಶ್ವಾಸದ್ರೋಹದ ದೂರಿಗೆ ಅವಕಾಶವಿಲ್ಲ

ವಿವಾಹೇತರ ಸಹ ಜೀವನದ (Live-in) ಸಂಬಂಧಗಳಲ್ಲಿ ಒಬ್ಬ ಸಂಗಾತಿ ಇನ್ನೊಬ್ಬ ಸಂಗಾತಿಯ ಮೇಲೆ ವಿಶ್ವಾಸದ್ರೋಹದ ಆಪಾದನೆ ಮಾಡುವಂತಿಲ್ಲವೆಂದು ದೆಹಲಿ ಉಚ್ಚ ನ್ಯಾಯಾಲಯದ ಏಕ ಸದಸ್ಯ ಪೀಠವೊಂದು ತೀರ್ಪು ನೀಡಿದೆ. "ವಿವಾಹೇತರ ಸಹ ಜೀವನವೆಂದರೆ ಬೇಕಾದಾಗ ಬಂದು, ಹೋಗುವ (walk-in, walk-out) ಸಂಬಂಧ. ಇಂಥ ಸಂಬಂಧದಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಸಹಜೀವನದ ಕುರಿತಂತೆ ವಿಶ್ವಾಸವನ್ನೆ ಇಟ್ಟಿರುವುದಿಲ್ಲವೆಂದ ಮೇಲೆ ವಿಶ್ವಾಸ ದ್ರೋಹದ ಪ್ರಶ್ನೆಯೆ ಬರುವುದಿಲ್ಲ", ಎಂಬುದು ತೀರ್ಪಿನ ಸಾರ.

ಆದರೆ ಈ ತೀರ್ಪು ವಿವಾಹೇತರ ಸಹಜೀವನ ನಡೆಸುವ ಅಥವಾ ಅದನ್ನು ಬೆಂಬಲಿಸುವ ಹಲವರಿಂದ ತೀವ್ರ ಟೀಕೆಗೆ ಗುರಿಯಾಗಿದೆ.

'ನ್ಯಾಯಾಧೀಶರು ತಮ್ಮ ನೈತಿಕ ದೃಷ್ಟಿಕೋನವನ್ನು ತೀರ್ಪಿನ ಮೂಲಕ ಸಮಾಜದ ಮೇಲೆ ಹೇರಲು ಹೊರಟಿದ್ದಾರೆ'. ಎಂಬುದು ಟೀಕಾಕಾರರ ವಾದ.

## ಅಂತರ ದೇಶಿಯ ದತ್ತು : ಕಾನೂನು ತನ್ನಿ - ಸ.ನ್ಯಾ.

ಅಂತರ ದೇಶಿಯ ದತ್ತು ಸ್ವೀಕಾರದಂತಹ ಗಂಭೀರ ವಿಷಯದ ಬಗ್ಗೆ ಭಾರತದಲ್ಲಿ ಕಾನೂನು ಇಲ್ಲದಿರುವುದನ್ನು ಮನಗಂಡ ಸರ್ವೋಚ್ಚ ನ್ಯಾಯಾಲಯ ಈ ವಿಷಯದ ಕುರಿತು ಕಾನೂನು ರೂಪಿಸುವಂತೆ ಕೇಂದ್ರ ಸರಕಾರಕ್ಕೆ ಸಲಹೆ ಮಾಡಿದೆ.

ಈ ಪ್ರಕರಣದ ಹಿನ್ನೆಲೆ ಹೀಗಿದೆ. ಅಮೇರಿಕಾದ ದಂಪತಿಗಳಿಬ್ಬರು -ಕ್ರೇಗ್ ಅಲೆನ್ ಕೋಟ್ಸ್ ಮತ್ತು ಅವರ ಹೆಂಡತಿ ಸಿಂಥಿಯಾ ಆ್ಯನ್ ಕೋಟ್ಸ್ -ಭಾರತದ ೧೧ ವರ್ಷದ ಮಾನಸಿಕ ಅಸ್ವಸ್ಥ ಮಗುವೊಂದನ್ನು ದತ್ತು ಪಡೆಯಲು ನಿರ್ಧರಿಸಿ ದೆಹಲಿಯ ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ ಅನುಮತಿ ಕೇಳಿದರು. ಅನುಮತಿ ನಿರಾಕರಿಸಲಾಯಿತು. ದೆಹಲಿ ಉಚ್ಚ ನ್ಯಾಯಾಲಯವೂ ಅನುಮತಿ ನಿರಾಕರಿಸಿತು.

ಪ್ರಕರಣ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿದಾಗ, ನ್ಯಾಯಾಲಯದ ಪೀಠವೊಂದು "ಈ ವಿಷಯದಲ್ಲಿ ನಾವೇಕೆ ಮಧ್ಯೆ ಪ್ರವೇಶಿಸಬೇಕು? ಮಗುವನ್ನು ಭಾರತದ ಹೊರಗೆ ತೆಗೆದುಕೊಂಡು ಹೋದನಂತರ ಈ ವಿಷಯದಲ್ಲಿ ನಮಗೇನು ಅಧಿಕಾರ ವ್ಯಾಪ್ತಿ (Jurisdiction) ಉಳಿಯುತ್ತದೆ? ಅಲ್ಲಿ ಮಗು ಶೋಷಣೆಗೊಳಗಾದರೆ ಪರಿಹಾರವೇನು?" ಎಂದು ಪ್ರಶ್ನಿಸಿ ಅಪೀಲನ್ನು ವಜಾ ಮಾಡಿತು. ಈ ಸಂದರ್ಭದಲ್ಲಿ ಅಂತರ ದೇಶಿಯ ದತ್ತು ಸ್ವೀಕಾರಕ್ಕೆ ಸಂಬಂಧಿಸಿದಂತೆ ಕಾನೂನು ರೂಪಿಸುವಂತೆ ಕೇಂದ್ರ ಸರಕಾರಕ್ಕೆ ಮತ್ತು ಲಾ ಕಮಿಷನ್ನಿಗೆ ಕರೆ ಕೊಟ್ಟಿತು.

## ತೃತೀಯ ಲಿಂಗಿಗಳಿಗೆ ಬೇರೆ ಕಾಲಂ

ಮಂಗಳ ಮುಖಿಯರು ಈ ಜನಗಣತಿಯ ವೇಳೆ ವಿಶೇಷವಾಗಿ ಗಣತಿಗೊಳ್ಳಲಿದ್ದಾರೆ.

ಜನಗಣತಿಯ ರೆಜಿಸ್ಟ್ರಾರ್ ಜನರಲ್ ರಚಿಸಿದ್ದ ತಾಂತ್ರಿಕ ಸಲಹಾ ಮಂಡಳಿಯ ವರದಿಯಂತೆ ತೃತೀಯ ಲಿಂಗಿಗಳನ್ನು ಈ ಜನಗಣತಿಯಲ್ಲಿ ವಿಭಿನ್ನ ಲಿಂಗಿಗಳೆಂದು ಗಣಿಸಲು ಯೋಜಿಸಲಾಗಿದೆ.

*(ಜನಗಣತಿಯ ಬಗೆಗಿನ ಲೇಖನಕ್ಕಾಗಿ ನೋಡಿ ಮೇ ತಿಂಗಳ ಸಂವಾದದ 'ಪ್ರಚಲಿತ' ಸಂ.)*

ಪ್ರಕಾಶಕರು : ಎಸ್. ಎನ್. ಪ್ರಶಾಂತಚಂದ್ರ, ಲಹರಿ ವಕೀಲರ ವೇದಿಕೆ, ನಂ. ೨೯೮೦, 'ಲಕ್ಷ್ಮೀದೀಪ', ೧೭ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು-೫೬೦ ೦೭೦
ಮುದ್ರಣ : ವೀ ಕೇ ಪ್ರಿಂಟರ್ಸ್ & ಪಬ್ಲಿಷರ್ಸ್, ನಂ. ೩೬, ಊಳಿಗಾ ಕಾಂಪ್ಲೆಕ್ಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩ ಸಂಪರ್ಕಿಸಿ : aravindneglur@gmail.com
KARBIL 01707 / 10 /1/2009-TC MAG/(2)/LR/PRB/70/10-11 ಸಂಪಾದಕರು : ಅರವಿಂದ ಎಂ. ನೆಗಳೂರ